UNIVERSAL LIBRARY
OU_200937
UNIVERSAL LIBRARY

ಶ್ರೀ ಹೆಬ್ಬಾಳ್, ಶೇಷಶಾಸ್ತ್ರಿಗಳು

ಶ್ರೀ ಅಷ್ಟಾವಧಾನಿ, ನರಸಿಂಹಶಾಸ್ತ್ರಿಗಳು

ಶ್ರೀ ಸಗರ ಕೃಷ್ಣಾಚಾರ್ಯ, ಬಿ. ಎ.

ಮೊದಲನೆಯ ಮುದ್ರಣ

ಒಂದು ಸಾವಿರ.

೧೯೫೫

ಮುದ್ರಕರು:
ಕಲ್ಯಾಣ ಕರ್ನಾಟಕ ಮುದ್ರಣಾಲಯ
ಕಲಬುರ್ಗಿ.

ಬೆಲೆ ೦—೮—೦

# ಮುನ್ನುಡಿ

ರಂಗಂಪೇಟೆಯ ಗೆಳೆಯರು ಈಗ ಕೆಲವು ವರ್ಷಗಳಿಂದ ಸಂಘವೊಂದನ್ನು ಕಟ್ಟಿಕೊಂಡು ಕನ್ನಡನಾಡು ನುಡಿಗಳ ಸೇವೆಯನ್ನು ಮಾಡುತ್ತಿರುವುದು ಎಲ್ಲರಿಗೆ ತಿಳಿದ ವಿಷಯವಾಗಿದೆ. ಈ ಮಿತ್ರರು ಗ್ರಂಥ ಪ್ರಕಟನೆಯ ಕಾರ್ಯವನ್ನೂ ಕೈಕೊಂಡು ಪ್ರಗತಿಮಾರ್ಗ-ದಲ್ಲಿ ಮುನ್ನಡಿಯಿಡುತ್ತಿರುವುದು ತುಂಬ ಸಂತೋಷದ ಸಂಗತಿ. ತಾವು ಈಗ ಪ್ರಕಟಿಸುತ್ತಿರುವ "ಕವನ ಕುಸುಮ" ವೆಂಬ ಕವನ ಗಳ ಕಿರುಹೊತ್ತಗೆಗೆ ಮುನ್ನುಡಿಯನ್ನು ಬರೆದುಕೊಡಬೇಕೆಂದು ಗೆಳೆಯ ಸಗರ ಕೃಷ್ಣಾಚಾರ್ಯರು ನನ್ನನ್ನು ಕೇಳಿದರು ಈ ವಿಷಯ ದಲ್ಲಿ ನನ್ನ ಅಯೋಗ್ಯತೆಯನ್ನು ಇತರರಿಗಿಂತ ನಾನೇ ಹೆಚ್ಚುಬಲ್ಲೆ ನಾದರೂ ಅವರ ಆಗ್ರಹಕ್ಕೆ ಕಟ್ಟುಬಿದ್ದು ಈ ಕೆಲಸಕ್ಕೆ ಕೈಹಾಕುವ ಸಾಹಸ ಮಾಡಿದ್ದೇನೆ.

"ಪ್ರತಿಭಾನಂ ಕಾವ್ಯವಿದ್ಯಾ ಪ್ರಚಯಪರಿಚಯಂ ವೃದ್ಧಸೇವಾನುರಾಗಂ।
ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ............"

ಎಂದು ಹೇಳಿ ನಾಗವರ್ಮನು ಕವಿತ್ವದ ನಾಲ್ಕು ಮಹತ್ವದ ಆಕರ ಗಳನ್ನು ಸೂಚಿಸಿದ್ದಾನೆ. ಕಾವ್ಯಸೃಷ್ಟಿಗೆ ಮೊದಲು ಬೇಕಾದುದು ಪ್ರತಿಭೆ. ಪ್ರತಿಭೆ ಎಂದರೆ ಹೊಳವು ಅಥವಾ ಹೊಳೆಯುವುದು ಎಂದರ್ಥ. ಯಾವುದರಿಂದ ಹೊಸ ಹೊಸ ಭಾವಗಳು ಹೊಳೆಯು ವವೋ ಮತ್ತು ಸರಸವಾಗಿ ನಿರೂಪಿಸಲ್ಪಡುವವೋ ಅಂತಹ ಶಕ್ತಿಗೆ ಪ್ರತಿಭೆ ಎನ್ನುವರು. ಇದರ ಬಲದಿಂದಲೆ ರವಿ ಕಾಣದ್ದನ್ನು ಕವಿ ಕಾಣುವನು. ಕವಿಯಾಗಬಯಸುವವನು ಅನೇಕ ಕಾವ್ಯಶಾಸ್ತ್ರಗಳನ್ನು

ಚೆನ್ನಾಗಿ ಪರಿಶೀಲಿಸಿ ನಿಪುಣತೆಯನ್ನು ಪಡೆದವನಾಗಿರಬೇಕು. ಜೊತೆಗೆ ವೃದ್ಧಸೇವೆ ಎಂದರೆ ಜ್ಞಾನವೃದ್ಧರನ್ನು ಮತ್ತು ಕಾವ್ಯಜ್ಞರನ್ನು ಅನುಸರಿಸಿಕೊಂಡಿದ್ದು ಅವರಿಂದ ಪದೇಪದೇ ಉಪದೇಶವನ್ನು ಪಡೆಯುತ್ತ ಇರಬೇಕು. ತಾನು ಆಲಸ್ಯವನ್ನುಳಿದು ಉದ್ಯೋಗದಲ್ಲಿ ತೊಡಗಿರಬೇಕು. ಲೋಕಾನುಭವವನ್ನು ತುಂಬಿಕೊಂಡು ತಾನು ಅನುಭವಿಸಿದ ಸುಖದುಃಖಾತ್ಮಕ ಹೃದಯ ಸಂವೇದನೆಯನ್ನು ಇತರರಿಗೂ ಹಂಚಿ ಕೊಡುತ್ತ ಅವರನ್ನು ಸನ್ಮಾರ್ಗಕ್ಕೆ ತರುವ ಮನೋವೃತ್ತಿಯುಳ್ಳವನಾಗಿರಬೇಕು.

ಈ ಒಂದು ನಿಕಷಕ್ಕೆ ಪ್ರಸ್ತುತ ಕವನ ಸಮುದಾಯ-ವನ್ನು ಒರೆಹಚ್ಚಿ ನೋಡಲಾಗಿ ಇದರಲ್ಲಿನ ಕೆಲವು ಕವನಗಳು ನಮಗೆ ಇಷ್ಟವಾದ ಮಟ್ಟವನ್ನು ತಟ್ಟಿವೆ, ಬೇರೆ ಕೆಲವು ತಟ್ಟಲಿವೆ, ಎಂದು ಹೇಳಬಹುದಾಗಿದೆ. ಹಿಂದೊಮ್ಮೆ ನಮ್ಮ ನಾಡಿನ ಈ ಭಾಗದಲ್ಲಿ ತುಂಬಿ ಚೆಲ್ಲಾಡಿದ ಕಾವ್ಯಗಂಗೆ, ನಡುವೆ ಗುಪ್ತಗಾಮಿನಿಯಾಗಿ, ಕನ್ನಡ ನಾಡಿನ ನವೋದಯದ ಈ ಸಮಯದಲ್ಲಿ, ಮತ್ತೆ ಪುಟಿಯ ತೊಡಗಿದುದು ಯಾರಲ್ಲಿ ತಾನೆ ಹೊಂಪುಳಿಯನ್ನು ಹುಟ್ಟಿಸಲಿಕ್ಕಿಲ್ಲ!

ಶ್ರೀ. ಇರಾ ಅವರ ' ಕವನ ಕುಸುಮ ' ವು ಸೌಷವಯುಕ್ತವಾಗಿದ್ದರೂ, ಇನ್ನೂ ಸ್ವಲ್ಪ ಅರಳಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ. ಅವರ ' ಬೆಳ್ಳಿಯ ಚಿಕ್ಕೆ ' ಮಾತ್ರ ತೃಪ್ತಿಮಯ ಜೀವನದ ಬೆಳಕನ್ನು ಚೆನ್ನಾಗಿ ಹೊಮ್ಮಿಸಿದೆ. ಕಾವ್ಯಾನಂದರ ' ಎದೆಯ ತೋಟ ' ಎಂಬ ಕವನವು ಲಲಿತವಾಗಿದೆ. ಕವಿಗಳು —

' ಚಿತ್ತಭೂಮಿಯು ಮಾತ್ರ ಫಲವತ್ತವಾಗಿರಲಿ
ಮತ್ತೆ ಹೃದಯಾರಾಮ ಕೊನರಬಹುದು '

ಎಂಬ ಅಮರ ಸಂದೇಶದೊಡನೆ ಸಾಹಿತ್ಯಸೇವೆ ಮಾಡಬೇಕೆನ್ನುವವರ ಬೆನ್ನು ತಟ್ಟಿದ್ದಾರೆ. ಶ್ರೀ. ಮಾನ್ವಿಯವರು ತಮ್ಮ ಸ್ವಾಭಾವಿಕವಾದ ಮಿಂಚಿನ ನುಡಿಯಲ್ಲಿ ಸ್ವಾರ್ಥಮಯ ಜೀವನವನ್ನು ಹಳಿದು, ವಿಶ್ವಜೀವನದ ದರ್ಶನವನ್ನು ತಮ್ಮ ಕವನದಲ್ಲಿ ನಮಗೆ ಮಾಡಿಸಿ ಕೊಟ್ಟಿದ್ದಾರೆ. ನಿಜವಾದ 'ಸನ್ಯಾಸಿ' ಯಾರು ಎಂಬುದನ್ನು ತವಗರು ಮಾರ್ಮಿಕವಾಗಿಯೇ ಹೇಳಿದ್ದಾರೆ. ಶ್ರೀ. ಉಪಾಧ್ಯಾಯ ಹನು-ಮಂತಾಚಾರ್ಯರು ತಮ್ಮ ಒಂದು ಕವನದಲ್ಲಿ, ಬಡವ ಬಲ್ಲಿದ-ರೊಳಗಣ ವೈಷಮ್ಯವನ್ನು ದುಡಿಮೆಯ ಮೂಲಕ ಅಳಿದು, ಈಗಿನ ಕೀಳು ಬಾಳನ್ನು ಹೊಂಬಾಳು ಮಾಡಲು, ನಾಡಿನ ತರುಣರಿಗೆ ಕರೆಯನ್ನಿತ್ತಿದ್ದಾರೆ. ಮತ್ತು ಶಮೀ ಶಮಯತೇ ಭೀತಿಂ' ಎಂಬ ಇನ್ನೊಂದು ಕವನದಲ್ಲಿ, ಪ್ರೇಮಮಯ ಮಾರ್ಗದಿಂದ ವಿಶ್ವಶಾಂತಿ-ಯನ್ನು ಗೆದ್ದು ವಿಜಯ ದಶಮಿಯ ಆಚರಣೆಯನ್ನು ಸಾರ್ಥಕ–ಗೊಳಿಸಬೇಕೆಂದು ಹೇಳಿದುದು, ಸಮಯೋಚಿತವಾಗಿದೆ. ಬದುಕಿನಲ್ಲಿ ಶಿವವನ್ನು ತರಲು ಕವಿಯು ಶಿವನನ್ನು ಕೆಣಕಿದುದು, 'ಶಂಭೋ ಶಂಕರ' ಎಂಬ ಹಕಾರಿಯವರ ಗುಡುಗಾಟದಲ್ಲಿ ಕಾಣಬಹುದಾಗಿದೆ. ಶರಣಬಸವ ಜಾವಳಿ ಅವರು, ನಾಡು ಎಂದು ಒಂದುಗೂಡಬಹುದೋ ಎಂದು ತಮ್ಮ ಕವನದಲ್ಲಿ ಹಂಬಲಿಸಿದ್ದಾರೆ. ರಾ. ಭೀ. ಮನಸಬದಾರರು, ಶ್ರೀಗಳು ಮತ್ತು ಮಲ್ಲಿಕಾರ್ಜುನ ಮಸ್ಕಿ ಅವರು ಕವಿಜೀವನ, ಮಾನವಜೀವನ ಮತ್ತು ತಾಯಿಯ ಹಿರಿಜೀವನ ಇವುಗಳ ಹಿರಿಮೆಯನ್ನು ತಮ್ಮ ಕೃತಿಗಳಲ್ಲಿ ಕೊಂಡಾಡಿದ್ದಾರೆ. 'ವಿಶ್ವಶಾಂತಿ' ಎಂಬ ಕವನದಲ್ಲಿ ಉದಯೋನ್ಮುಖ ಲಾವಣಿಕಾರ, ಎಂ. ಜಿ. ಅವರು ನಾಡಬಂಧುಗಳಿಗೆ, ವಿಶ್ವಶಾಂತಿಯನ್ನು ಸಾಧಿಸಲು

ವಿಶ್ವತೋಮುಖರಾಗಲು ಕೇಳಿಕೊಂಡಿದ್ದಾರೆ. ಪರಭಾಷೆಯ ಉತ್ತಮ ಕೃತಿಗಳು ನಮಗೆ ಇಷ್ಟ, ಈ ಮಾತನ್ನು ನಮ್ಮ ಕವಿಗಳು ಕಡೆಗಣಿಸಿಲ್ಲ, ಎಂಬುದಕ್ಕೆ ಶ್ರೀಪತಿಯವರ "ವಿರಕ್ತ" ಎಂಬ ಕವನವು ಸಾಕ್ಷಿಯಾಗಿದೆ. ಆಸೆ, ನಾಡಹಬ್ಬ, ಹಳಬರು, ಕಮಲ, ಸಪ್ತಾ-ರ್ಭಕರು, ದೈವದೊಲುಮೆ, ಮುಂತಾದ ಕವನಗಳು ಬೀಜರೂಪದ-ಲ್ಲಿರುವ ಕವಿಹೃದಯದ ದಿವ್ಯ ದ್ಯೋತಕಗಳಾಗಿವೆ. ಮಹಾಯುದ್ಧದ ಅನಾಹೂತಗಳನ್ನು ಬಣ್ಣಿಸಿ ಅಮರ ಶಾಂತಿಗಾಗಿ ಹಂಬಲಿಸಿದ ಇಂದಿ-ರೇಶರ 'ಬಿರುಗಾಳಿ' ಎಂಬ ಕವಿತೆ ಕಮನೀಯವಾಗಿದೆ. ಇಂದಿರೇಶರು ತಮ್ಮ ಇನ್ನೊಂದು ಕವನದಲ್ಲಿ ನಗರನಾಡಿನ ನೈಸರ್ಗಿಕ ಮತ್ತು ಚಾರಿತ್ರಿಕ ವರ್ಣನೆಯನ್ನು ಹೃದಯಂಗಮವಾಗಿ ಮಾಡಿದರೆ, ಸಹಜ ಕವಿಗಳಾದ ಜ. ಶ್ರೀ. ದೇಸಾಯಿಯವರು ತಮ್ಮೊಂದು ಕವನದಲ್ಲಿ ಶಹಪುರದ ತಾವರಿಕೆರೆಯನ್ನು ಕಣ್ಣಿಗೆ ಕಟ್ಟಿದಂತೆ, ಮನಮೆಚ್ಚುವಂತೆ ಬಣ್ಣಿಸಿದ್ದಾರೆ.

ಈ ಎಲ್ಲ ಕವಿತೆಗಳಲ್ಲಿ ಭಾಷೆಯಿದೆ, ಭಾವವಿದೆ, ಭಾವ ಪರಿಶುದ್ಧಿಯಿದೆ, ಹೃದಯದ ಆಳವಿದೆ, ಬುದ್ಧಿಯ ಔನ್ನತ್ಯವಿದೆ, ದಿವ್ಯ ಜೀವನದರ್ಶನವಿದೆ. ಇಂತಹ ಅನೇಕ ಸುಂದರ ಕೃತಿಗಳು ಇನ್ನೂ ಚೆನ್ನಾಗಿ ಮೈತುಂಬಿಕೊಂಡು ಈ ಮಿತ್ರರಿಂದಲೂ ಇನ್ನಿತರ ಸಮಾನಧರ್ಮೀಯರಿಂದಲೂ ನಮಗೆ ದೊರೆಯುವಂತಾಗಲಿ!

**ಜಗತ್ ಕಲಬುರಗಿ**
**೧೪-೧೦-೧೯೫೫**

**ತವಗ ಭೀಮಸೇನರಾವ್**
ಎಂ. ಎ., ಬಿ. ಟಿ.

# ಪ್ರಕಾಶಕರ ಎರಡು ಮಾತು

‘ ಅರುಣ ಗ್ರಂಥಮಾಲೆಯು ’ ಪ್ರಾರಂಭವಾಗಿ ಒಂದು ದಶಕದ ಮೇಲಾಗಿದ್ದರೂ ಈ ದೀರ್ಘಾವಧಿಯಲ್ಲಿ ‘ ಮಧುರ ಮಿಲನ ’ ಮತ್ತು ‘ ಜೀವನ ಸಂಸಾರ ’ ಎಂಬೀ ಎರಡೇ ಹೊತ್ತಿಗೆಗಳು ಹೊರ–ಬಿದ್ದುವು. ಗ್ರಂಥ ಪ್ರಕಾಶನ ಕಾರ್ಯ ಮುಂದುವರಿಸಬೇಕೆಂಬುದು ಸಂಘದ ಸದಸ್ಯರ ಮನಸ್ಸಿನಲ್ಲಿದ್ದರೂ ಅನನುಕೂಲತೆಗಳ ಮೂಲಕ ಇದುವರೆಗೂ ಸಾಧ್ಯವಾಗಿರಲಿಲ್ಲ. ಈ ಕಾರ್ಯಕ್ಕಾಗಿ ಪಕ್ವಕಾಲ ಒದಗಿ ಬಂದಿರಲಿಲ್ಲವೆಂದೇ ಭಾವಿಸಬೇಕಾಗಿದೆ. ಗ್ರಂಥ ಪ್ರಕಟಿಸುವ ಸುಯೋಗ ಈಗ ಒದಗಿದುದಕ್ಕೆ ತುಂಬ ಸಂತೋಷವಾಗುತ್ತಿದೆ. ಈ ಕೃತಿ ಅರುಣ ಗ್ರಂಥಮಾಲೆಯ ಮೂರನೆಯ ಕಿರಣ.

ಕನ್ನಡಿಗರ ಕೈಯಲ್ಲಿರಿಸುತ್ತಿರುವ ಕೃತಿ ‘ ಕವನ–ಕುಸುಮ ’ ಕವನ ಕಾಸಾರದಲ್ಲಿಯ ಒಂದು ಸದ್ಯೋಜಾತ ಕುಸುಮ! ಇದು ಹೈದರಾಬಾದು ಕರ್ನಾಟಕದ ( ನವಕರ್ನಾಟಕ ನಿರ್ಮಾಣವಾಗು-ವವರೆಗೆ ) ಕೆಲಹಿರಿಯ ಮತ್ತು ಕಿರಿಯ ಕನ್ನಡ ಕವಿಗಳ ಸಾಹಿತ್ಯ ಶಕ್ತಿಯ ನಿದರ್ಶನ! ಈ ಸಂಕಲನ ಶ್ರೀಗಳಾದ ಸಗರ ಕೃಷ್ಣಾಚಾರ್ಯ ಮತ್ತು ಎಂ. ಆರ್. ಬುದ್ಧಿವಂತಶೆಟ್ಟಿ, ಇವರ ಸತತ ಪ್ರಯತ್ನ ದಿಂದಲೇ ಹೊರಬೀಳುತ್ತಲಿದೆ. ಅದರಲ್ಲಿಯೂ ಶ್ರೀ ಬುದ್ಧಿವಂತಶೆಟ್ಟಿ ಯವರು ಮುದ್ರಣದ ಅರ್ಧ ವೆಚ್ಚವನ್ನು ವಹಿಸದಿದ್ದಲ್ಲಿ ಗ್ರಂಥ ಪ್ರಕಾಶನವು ದುಸ್ಸಾಧ್ಯವಾಗುತ್ತಿತ್ತು. ಅದಕ್ಕಾಗಿ ಅವರ ಉಪಕಾರ ಸ್ಮರಿಸಬೇಕಾಗಿದೆ.

ಈ ಕವನ ಸಂಗ್ರಹದಲ್ಲಿ ಹೈದರಾಬಾದು ಕರ್ನಾಟಕದ ಎಲ್ಲ ಕವಿಗಳ ಕವನಗಳು ಬಂದಿರಲಿಕ್ಕಿಲ್ಲ. ಸಾಧ್ಯವಾದಷ್ಟು ಒಳ್ಳೆಯ ಕವನಗಳನ್ನೇ ಸಂಗ್ರಹಿಸಿ ಪ್ರಕಟಿಸುವ ಪ್ರಯತ್ನ ಮಾಡಿದ್ದೇವೆ. ಈ ಸಂಗ್ರಹದಲ್ಲಿ ಕವನಗಳನ್ನು ಸೇರಿಸಲು ಅನುಮತಿಯಿತ್ತ ಎಲ್ಲ ಕವಿಗಳನ್ನೂ ಸ್ಮರಿಸಬೇಕಾಗಿದೆ. ವಾಚಕರು ಈ ಕವನ ಸಂಗ್ರಹ

ವನ್ನು ಆದರದಿಂದ ಬರಮಾಡಿಕೊಂಡು ಓದಿ ಸಂತೋಷಿಸಿದರೆ ನಮ್ಮ ಶ್ರಮ ಸಾರ್ಥಕ; ಮತ್ತು ಮುಂದೆಯೂ ಗ್ರಂಥ ಪ್ರಕಟನ ಕಾರ್ಯದಲ್ಲಿ ಹುಮ್ಮಸ್ಸು ಬರಲು ಸಂದೇಹವಿಲ್ಲ.

ಅರುಣ ಗ್ರಂಥಮಾಲೆಗೆ ಶ್ರೀ ಸಗರ ಕೃಷ್ಣಾಚಾರ್ಯರು ಪ್ರಾರಂಭದಿಂದಲೂ ಸಲಹೆಗಾರರಾಗಿದ್ದಾರೆ. ಈ ಸಲ ಶ್ರೀಗಳಾದ ಹೆಬ್ಬಾಳ್ ಶೇಷಶಾಸ್ತ್ರಿಗಳೂ, ಅಷ್ಟಾವಧಾನಿ ನರಸಿಂಹಶಾಸ್ತ್ರಿಗಳೂ, ಸಲಹೆಗಾರರಾಗಿ ದೊರೆತಿದ್ದುದು ಗ್ರಂಥಮಾಲೆಯ ಪುರೋಭಿವೃದ್ಧಿಗೆ ಒಂದು ಶುಭಸೂಚನೆಯೆಂದೇ ಭಾವಿಸುತ್ತೇವೆ. ಮುಂದೆಯೂ ಸಲಹೆಗಾರರು ಕಾಲಕಾಲಕ್ಕೆ ತಮ್ಮ ಸಲಹೆಗಳನ್ನಿತ್ತು ಗ್ರಂಥ ಪ್ರಕಾಶನ ಕಾರ್ಯದಲ್ಲಿ ತುಂಬ ಶ್ರೇಯಸ್ಸು ತಂದುಕೊಡುವರೆಂದು ನಂಬುತ್ತೇವೆ,

ಕುಸುಮಕ್ಕಿರುವ ಸೌಂದರ್ಯದಂತೆ ಈ ಕವನ ಕುಸುಮಕ್ಕೂ ಮುನ್ನುಡಿಯ ಅಲಂಕಾರ ಬೇಕಾಗಿತ್ತು. ನಮ್ಮ ಕೋರಿಕೆಯನ್ನು ಮನ್ನಿಸಿ ಆಕರ್ಷಕವಾದ ಮುನ್ನುಡಿಯೊಂದನ್ನು ದಯಪಾಲಿಸಿದ ಹಿರಿಯ ಸಾಹಿತಿಗಳಾದ ಶ್ರೀ ತವಗ ಭೀಮಸೇನರಾಯರಿಗೂ ನಮ್ಮ ಸಂಕಲ್ಪದಂತೆ ನಾಡಹಬ್ಬದ ಹೊತ್ತಿಗೆ ಸರಿಯಾಗಿ ಈ ಕವನಸಂಗ್ರಹ ವನ್ನು ಅಂದವಾಗಿಯೂ ಸಾಧ್ಯವಾದ ಮಟ್ಟಿಗೆ ಶುದ್ಧವಾಗಿಯೂ ಮುದ್ರಿಸಿಕೊಟ್ಟ ಕಲ್ಯಾಣ ಕರ್ನಾಟಕ ಮುದ್ರಣಾಲಯದ ಸಂಚಾಲಕರಾದ ಶ್ರೀ ಶರಣಯ್ಯನವರಿಗೂ, ಇನ್ನಿತರ ಕೆಲಸಗಾರರಿಗೂ, ಮತ್ತು ಕೊನೆಯದಾಗಿ ಈ ಗ್ರಂಥದ ಸಂಪಾದನ ಕಾರ್ಯದಲ್ಲಿ ನೆರವಾದ ಸಂಪಾದಕರಿಗೂ, ಇನ್ನಿತರ ಎಲ್ಲ ಮಹನೀಯರಿಗೂ ಸಂಘವು ಕೃತಜ್ಞವಾಗಿದೆ.

ರಂಗಂಪೇಟೆ ( ಸುರಪುರ )
೧೮ — ೧೦ — ೧೯೫೫

ಎಂ. ಆರ್. ಶಿವಣ್ಣ
ಗೌರವ ಕಾರ್ಯದರ್ಶಿ

# ವಿಷಯಾನುಕ್ರಮಣಿಕೆ


| | | | |
|---|---|---|---|
| ೧ | ಕವನ ಕುಸುಮ | ಇರಾ | ೧ |
| ೨ | ಎದೆಯ ತೋಟ | ಕಾವ್ಯಾನಂದ | ೩ |
| ೩ | ಅಯ್ಯೊ, ಫಲ ಹಾಳಾಯ್ತು ! | ಮಾಸ್ತಿ | ೫ |
| ೪ | ಸನ್ಯಾಸಿ | ತವಗ | ೯ |
| ೫ | ಕ್ರಾಂತಿಗೆ ಆಹ್ವಾನ | ಎಚ್. ಜಿ. ಉಪಾಧ್ಯಾಯ | ೧೦ |
| ೬ | ಶಮೀ ಶಮಯತೆ ಭೀತಿಮ್ | ,, | ೧೩ |
| ೭ | ಶಂಭೋ ಶಂಕರ ! | ರವಿ | ೧೬ |
| ೮ | ನಾಡಿನಲಿ ಒಲವೆಂದು ಮೂಡಬಹುದು ! | ಶರಣುಬಸವ ಜಾವಳಿ | ೧೯ |
| ೯ | ಬೆಳ್ಳಿಯ ಚುಕ್ಕಿ | ಇರಾ | ೨೧ |
| ೧೦ | ಕವಿರಾಜನ ಜೀವನ | ಮುನಸಬದಾರ | ೨೪ |
| ೧೧ | ಮಾನ್ಯ ಮಾನವ | ಶ್ರೀಗಳು | ೨೮ |
| ೧೨ | ತಾಯೆ ! | ಮಲ್ಲಿಕಾರ್ಜುನ ಮಸ್ಕಿ | ೨೯ |
| ೧೩ | ವಿಶ್ವಶಾಂತಿ | ಎಂ. ಜಿ. ಕುಲಕರ್ಣಿ | ೩೧ |
| ೧೪ | ವಿರಕ್ತ | ಶ್ರೀಪತಿ | ೩೨ |
| ೧೫ | ಆಶೆ | ರಘೂತ್ತಮ | ೩೩ |
| ೧೬ | ನಿರೀಕ್ಷಣೆ | ಕಸ್ತೂರಿ | ೩೪ |
| ೧೭ | ನಾಡಹಬ್ಬ | ಕಮಲಸಂಭವ | ೩೬ |
| ೧೮ | ಹಳಬರು | ಆರ್. ಎಸ್. ಹಿರೇಮಠ | ೩೭ |
| ೧೯ | ಕಮಲ | ಎಂ. ಜಿ. ರಸೂಲ್ | ೩೮ |
| ೨೦ | ಸಪ್ತಾರ್ಭಕರು | ಪಿ. ಗುಂಡಾಚಾರ್ಯ | ೩೯ |
| ೨೧ | ದೈವದೊಲುಮೆ | ರೇವಣಯ್ಯ | ೪೧ |
| ೨೨ | ಬಿರುಗಾಳಿ | ಇಂದಿರೇಶ | ೪೨ |
| ೨೩ | ಸಗರನಾಡಿಗೆ ಬಾ ! | ,, | ೪೫ |
| ೨೪ | ಶಹಪುರದ ತಾವರೆಕೆರೆ | ಜ. ಶ್ರೀ. ಜ. | ೪೮ |

# ಕವನ – ಕುಸುಮ

I

ದೂರದಲ್ಲಿ ಅರಳುತಿತ್ತು
ಒಂದು ಹೃದಯ ಸದಮಲ
ಗಾಳಿಯಲ್ಲಿ ತೂರಿ ಬಂತು
ಅದರ ಮಧುರ ಪರಿಮಳ

ಹೊತ್ತ ಬಳ್ಳಿ ಹಾಡುತಿತ್ತು
'ತಾನು ಪಡೆದ ಜೀವನ
ಸುತ್ತ ಬಯಲ ಭಿತ್ತಿಯನ್ನು
ಜೇನುಗೊಳಿಪ ಪ್ರೇರಣ'—

'ದೈವವಿತ್ತ – ಈ ನಿಮಿತ್ತ
ಮಾತ್ರ ತಾನು – ಕಾರಣ!
ಬಾಲರವಿಯು ಎತ್ತಿಕೊಳುವ
ಧನ್ಯ ಕ್ಷಿತಿಜ – ಮೂಡಣ!!'

II

ಅಲ್ಲೊ ಇಲ್ಲೊ ಎಲ್ಲೊ ಎಲ್ಲೊ
ಅಲೆಯುತಿದ್ದ ಮಧುವ್ರತಿ
ಹೂವೆ ಅಲ್ಲದಂಥ ಹೂವ
ಹೀರಿ, ನೊಂದ ದುರ್ಗತಿ —

ಸೀಗಲೆಂದು ಸಾಗಿ ಬಂದು
ತುಂಬಿ ನಿಲಲು ನೆಲ-ಜಲ
ತಾಗಿದಂದು ಅದರ ಗಂಧ
ಬಾಗಿ ನಿಂತ ಅಳಿಕುಲ—

ಹೃದಯ ತುಂಬಿ ಹಾಡುತಿತ್ತು:
'ಇದುವೆ ದಿವ್ಯ ಸಂಪದ!
ಪುಣ್ಯವಂತಿ, ತಾಯ ಹೊಟ್ಟೆ
ತಣ್ಣಗಿರಲಿ-ಸರ್ವದಾ!'

III

ಮನುಜನೆದೆಯ ಆಳಕಿಳಿದು
ಅಮೃತ ತರುವ ಭಾವನಾ,
ಕಲ್ಪಕುಜದ ಕವಿಯ ಬಯಕೆ:
**ಕವನ ಕುಸುಮ**-ಧಾರಣಾ!

— ಇರಾ.

---

**ಕವಿಪರಿಚಯ :—** ಕವನ-ಕುಸುಮವನ್ನರಳಿಸಿದ ಕವಿಗಳು ಶ್ರೀ ಇಟಗಿ ರಾಘವೇಂದ್ರಾಚಾರ್ಯ ಎಂ. ಎ. ಇವರು ಪ್ರತಿಭಾವಂತ ಕವಿಗಳು. ಇವರು ಮೊದಲು ಹೈದರಾಬಾದು ಬಾನುಲಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು, ಈಗ ಮೈಸೂರಿನ ಆಕಾಶವಾಣಿ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ರಾಯಚೂರು ಜಿಲ್ಲೆಯವರು.

# ಎದೆಯ ತೋಟ

ಎದೆಯ ತೋಟದೊಳೆನಿತೊ ಬಯಕೆಗಳ ಸಸಿನೆಟ್ಟೆ
ಅಳಿದುವೆನಿತೋ ಉಳಿದು ಬೆಳೆದುವೆನಿತೊ !
ಹೃದಯದೀ ಹೊಲದಲ್ಲಿ ಬಿತ್ತಿದಾಸೆಯ ಬೀಜ
ಮೊಳೆದುವೆನಿತೋ ಮೊಳೆಯದುಳಿದುವೆನಿತೊ !
ಈಶ ಕರುಣೆಯ ಸರಿಯು ಸುರಿಯದಿರೆ ಹುರುಪಳಿಸಿ
ನಾಶವಾದುವು ಕೆಲವು ಮೌನವಾಗಿ
ದಾಸಬುದ್ಧಿಯ ಸೆಕೆಗೆ ನಷ್ಟವಾದುವು ಕೆಲವು
ಆಸರಿಲ್ಲದೆ ಹಲವು ಮುದುಡಿ ಹೋಗಿ
ಕ್ಲೇಶ- ಕಂಟಕವಲ್ಲಿ ಗಾಸಿಗೊಳಿಸಲು ಕೊನೆಗೆ
ಬೇಸತ್ತು ಬಾಡಿದುವು ಬಳ್ಳಿ ಹಲವು
ದೋಷ- ಕೀಟಕ ಕೊರೆದು ಒಣಗಿದುವು ಹಲಕೆಲವು
ಮೋಸ-ಮೂಷಕ ಕಡಿದು ಮತ್ತೆ ಹಲವು
ದ್ವೇಷ ದುರಿತದ ಮಂಜು ಆವರಿಸೆ ಹಲಕೆಲವು
ಐಶ್ವರ್ಯವಿಲ್ಲದಕೆ ಇನ್ನು ಕೆಲವು
ಈಸು ಸಂಧಿಯು ಸಿಗದೆ ಲೋಪವಾದುವು ಕೆಲವು
ಶೋಷಣೆಗೆ ತುತ್ತಾದುವಿನ್ನು ಕೆಲವು
ಪ್ರತಿಕೂಲ ಆವರಣ, ಕಾಲ, ಬಿದಿ, ಕುಲವೆಂಬ
ಮಿಡಿತೆಗಳ ಪಾಲಾಗಿ ನಶಿಸಿದುವು ಕೆಲವು

## ಎದೆಯ ತೋಟ.

ಮತಿಹೀನ ಜನಮತಕೆ ಸತಿಸುತರ ಛಲ ಹಟಕೆ
ಹಿತವೈರಿ ಪಡ ಹತಿಗೆ ಮತ್ತೆ ಹಲವು
ನೂರು ಆಸೆಯು ಬಳ್ಳಿ ನಾಶ ಹೊಂದಿದೊಡೇನು
ನಿರಾಶೆಗೆಡೆಯೆಲ್ಲಿಹುದು ಎದೆಯ ತೋಟ?
ತೂರಿ ತರುವುದು ಹೊಸತು ಆಸೆಗಳ ಬೀಜಗಳ
ಮಾರಾರಿ ಕೃಪೆಯೆಂಬ ಪವನ ಸತತ?
ಚಿತ್ತ ಭೂಮಿಯನುತ್ತು ಹದಗೊಳಿಸಿ ಅಣಿಯಾಗು
ಬಿತ್ತುವನು ಬೇರಿಹನು ಮತ್ತೆ ಬಿತ್ತುವನು
ಬಿತ್ತಿದಾಸೆಗಳೆಲ್ಲ ಫಲಿಸಲೇ ಬೇಕಿಲ್ಲ
ಬಿತ್ತುಗಳ ಬರವಿಲ್ಲ ಮತ್ತೆ ಬಿತ್ತುವನು
ನಿತ್ಯವೂ ಹೊಸ ಆಸೆ ಅಂಕುರಿಸಬಹುದಿಲ್ಲಿ
ನಿತ್ಯವೂ ಅಂಕುರವು ಕಮರಬಹುದು!
ಚಿತ್ತಭೂಮಿಯು ಮಾತ್ರ ಫಲವತ್ತವಾಗಿರಲಿ
ಮತ್ತೆ ಹೃದಯಾರಾಮ ಕೊನರಬಹುದು!

— ಕಾವ್ಯಾನಂದ.

---

**ಕವಿ ಪರಿಚಯ :—** ಎದೆಯ ತೋಟವನ್ನು ಹುಲುಸಾಗಿ ಬೆಳೆಸಿದ ಕವಿಗಳು ಈಗಾಗಲೇ ಪ್ರಸಿದ್ಧಿಯನ್ನು ಹೊಂದಿದ ಶ್ರೀ. ಸಿದ್ಧಯ್ಯ ಪುರಾಣಿಕ ಬಿ. ಎ., ಎಲ್ ಎಲ್. ಬಿ., ಇವರು. ಇವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ದುಡಿದವರು; ದುಡಿಯುತ್ತಿರುವವರು.

# ಅಯ್ಯೋ, ಫಲ ಹಾಳಾಯ್ತು!

ಬಾಳ್ಗೆ ಕೇಡನೆ ಬಗೆವ
ಸಂಘ ಜೀವನ ಮುರಿವ
ಹಾಳು ಫಲವನು ಮನದಿ ಬಿತ್ತಬೇಡ.
ಏಳೇಳು ಮಾನವನೆ
ಎಂಬ ಗರ್ಜನೆ ಬಿಟ್ಟು
ಬೀಳೆಂಬ ಪಲ್ಲವಿಯ ಹಾಡಬೇಡ.

ಯಾವುದೋ ಕಲ್ಪನೆಯ
ಜಾಲ ಮನದಲಿ ಬೀಸಿ
ಧ್ಯೇಯ ಪಕ್ಷಿಯ ಹಿಡಿದು ಕೊಲ್ಲಬೇಡ.
ನಾನೆಂಬ ಅಭಿಮಾನ
ಲೋಕ ಕಲ್ಯಾಣಕ್ಕೆ
ಭಂಗ ತರುವುದ ನೀನು ಮರೆಯಬೇಡ.

ಹರಿವ ನದಿಯೊಳು ಮಿಂದು
ಪುಣ್ಯ ಗಳಿಪುದ ಬಿಟ್ಟು
ಊರ ಕೊಳಕನೆ ತಂದು ತುಂಬಬೇಡ.
ಮುದದ ಕೆನೆವಾಲಿನಲಿ
ಕಿಸುರ ನಂಜನೆ ಬಿಟ್ಟು
ನಿನ್ನ ಶೌರ್ಯಕೆ ನೀನು ಮೆಚ್ಚಬೇಡ.

## ಅಯ್ಯೊ ಛಲ, ಹಾಳಾಯ್ತು !

ಊರು ಮುಟ್ಟಲು ನೂರು
ದಾರಿಗಳು ಉಂಟೆಂಬ
ಪೂರ್ವಿಕರ ಮಾತುಗಳ ಹಳಿಯಬೇಡ.
ಕೇರಿ ಬಾಳಿಗೆ ಒಲಿದು
ಊರ ಕೇಡನೆ ಬಗೆದು
ಬೆನ್ನ ಚಪ್ಪರಿಸುತ್ತ ನಲಿಯಬೇಡ.

ನನ್ನ ಮತವೇ ಮತವು
ಅನ್ಯ ಮತಗಳು ಸುಳ್ಳು
ಎಂಬ ಹುಸಿಯುಸುಕಿನಲಿ ಸಿಕ್ಕಬೇಡ
ವಿಶ್ವ ಜೀವನ ವಾರ್ಧಿ
ವಿಸ್ತಾರವಾಗಿರಲು
ಗಿಂಡೆ ನೀರಾಗುತ್ತ ಮೊಳಗಬೇಡ.

ಎನಿತಾದರಾಗಲಿ—
ನ್ನೊಳಿತಾಗಿ ಲೋಕಕ್ಕೆ
ಜನ ಬಾಳಿ ಬದುಕಲೆಂದೆನ್ನಬೇಡ ?
ಹನಿ ನಂಜೆ ಹಳ್ಳಕ್ಕೆ
ಮಿತ್ತೆಂಬ ನಾಣ್ಣುಡಿಯ
ತಿಳಿದು ನೀನದರಂತೆ ನಡೆಯಬೇಡ ?

ಅಣ್ಣ ಮಾನವ ನಿನ್ನ
ಸಣ್ಣತನವನೆ ಬಿಟ್ಟು
ಕಣ್ಣು ಕೊಡು ಲೋಕಕ್ಕೆ ಆತ್ಮ ಬಲದಿ.

ಇಲ್ಲ ಸಲ್ಲದ ಭೇದ
ವೈಷಮ್ಯಗಳ ಬಿಟ್ಟು
ಬಣ್ಣ ಕೊಡು ಜೀವನಕೆ ಶೀಲಬಲದಿ.

ಗಡಿಗೆ ಮಾಡಲು ಹೊರಟ
ಕುಂಬಾರ ಗುರಿ ಮರೆದು
ಮಣ್ಣು ತುಳಿತದಿ ತನ್ನ ಮುಕ್ತಿಯರಸುವೊಲು
ತನ್ನ ತಿದ್ದಲು ಬಗೆದು
ಜಗದ ಕುಂದಿಗೆ ಒಲಿದು
ಉನ್ನತ ಧ್ಯೇಯವನು ಮರೆವುದೇಕೆ?

ದಾರಿಗಳ ಸಾರ್ಥಕ್ಯ
ಗುರಿ ಮುಟ್ಟುವುದರಲ್ಲಿ
ಆದ ಬಿಟ್ಟು ನಡೆವುದೇಂ ಜಾಣತನವೆ?
ಗುರಿ ತಪ್ಪಿಸುವ ದಾರಿ
ರಮ್ಯವಾದರು ಬೇಡ
ಹಾದಿ ಹಂಬಲವೊಂದೆ ಬಾಳಗುರಿಯೆ?

ಏಕಿಷ್ಟು ತೊಡಕುಗಳು
ಏಕಿಷ್ಟು ಮಿಡುಕುಗಳು
ಗುರಿ ಇರಲು ಕೈಯಳತೆಯಲಿ ನಮ್ಮಗೆ.
ಅಯ್ಯೊ, ಛಲ ಹಾಳಾಯ್ತು!
ಸ್ವರ್ಗ ನರಕವ ಗೈದು
ಬಾಳ ಜೇಂಗೊಡವಿಂದು ನಂಜು ಆಯ್ತು

ಆವ ಕಾಲಕೆ ದೇವ
ಬಾಳ ತಿದ್ದುವೆ ನೀನು
ಲಾಗ ಹಾಕುವ ಬುದ್ಧಿ ನಿಲ್ವುದೆಂದು ?
ತ್ಯಾಗ ಸಾಮ್ರಾಜ್ಯದಲಿ
ಪ್ರೇಮ ಪೀಯೂಷವನು
ಸರ್ವ ಲೋಕಕೆ ಹಂಚಿ ಕೊಡುವುದೆಂದು ?

ಬರಿ ಕನಸೆ, ಬರಿ ಮಾತೆ,
ಹಿರಿಯರಾ ಹರಕೆಗಳು
ತತ್ವ ಸಿದ್ಧಾಂತಗಳು ನಡತೆಗಲ್ತೆ ?
ಮಾನವರ ಬಾನವರ
ಗೈವೆನೆಂಬಾ ನುಡಿಗೆ
ಇನ್ನೇನು ವಿಧಿಯಿತ್ತ ಸೋಲೆ ಗತಿಯೆ ?

'ಮಾನ್ವಿ'

---

ಕವಿ ಪರಿಚಯ :— 'ಅಯ್ಯೊ ಛಲ ಹಾಳಾಯ್ತು' ಎಂದಿರುವ ಪ್ರತಿಭಾವಂತ ಕವಿ ವಿದ್ವಾನ್ ಶ್ರೀ ಮಾನ್ವಿ ನರಸಿಂಗರಾಯರು ಎಂ. ಎ. ಎಲ್ ಎಲ್. ಬಿ. ಪಿ. ಓ. ಎಲ್. ಇವರ ಪರಿಚಯ ಬೇರೆಯಾಗಿ ಮಾಡಿಕೊಡುವದೇನಿದೆ? ಇವರು ಹೈದರಾಬಾದಿನ ಪ್ರಸಿದ್ಧ ಸಾಹಿತಿಗಳು. ಈ ಕವನದಲ್ಲಿ ಅವರು ಇಂದಿನ ಜನರ ಮನೋಭಾವನೆಯನ್ನು ಚೆನ್ನಾಗಿ ಚಿತ್ರಿಸಿದ್ದಾರೆ.

# ಸನ್ಯಾಸಿ

ಕಾವಿ ಬಟ್ಟೆಯ ಧರಿಸಿ ಭಸ್ಮವನೆ ತಾಂ ಪೂಸಿ
ಜಪದ ಸರವಂ ತಿರುವುತೋಂಕಾರವೆಣಿಸುತ
ನಾಡಾಡಿಯಾಗಿಯೋ ಬಾನಾಡಿಯಂತೆಯೋ
ಸಲುವ ಮಾನವನೆ ಸನ್ಯಾಸಿ! ಬೇರಿಲ್ಲವೋ?
ನಿರ್ವೇಗದಿಂದಲೋ ಸಂಸಾರಕಳುಕಿಯೋ
ಆತ್ಮದೇಳಿಗೆಯ ಹಂಬಲವೆ ಹಿರಿದಾಗಿಯೋ
ಜಗದಾದಿ ದೇವನಾಪತ್ತಿಗೆಯ ಸೆಳೆತಕೋ
ಏಕಾಂತ ಕೆಳಸುವಂ ಸನ್ಯಾಸಿ! ಬೇರಿಲ್ಲವೋ?
ತ್ಯಾಗದಗ್ನಿಯೊಳಮಮ! ಸ್ವಾರ್ಥವನೆ ಬಲಿಗೆಯ್ದು
ನಾಡವರ ಹಿತಕೆಂದು ಸಕಲ ಶಕ್ತಿಯನೆರೆದು
ಅವರ ಹಿತಸಾಧನವೆ ಆತ್ಮಸಾಧನವೆಂಬ
ಅವರ ಕೈ ಹಿಡಿದಂತೆ ಮುಂದು ಮುಂದಕೆ ನಡೆವ
ಮೋಹನ ಜವಾಹರರು ಆಜಾದ ವಲ್ಲಭರು
ಸನ್ಯಾಸಿಗಳಲ್ಲದಿರೆ ಮತ್ತಾರು? ಪೇಳಾ.

— ತವಗ

---

**ಕವಿಪರಿಚಯ :—** ‘ಸನ್ಯಾಸಿ’ ಎಂಬ ಕವನವನ್ನು ರಚಿಸಿದ ಶ್ರೀ. ಭೀಮಸೇನರಾವ್ ತವಗ ಎಂ. ಎ., ಬಿ. ಟಿ. ಇವರು ಕಲಬುರಗಿಯ ಡಿಗ್ರಿ ಕಾಲೇಜಿನಲ್ಲಿ ಮಹೋಪಾಧ್ಯಾಯರು. ಇವರಿಂದ ಹೆಚ್ಚು ಸಾಹಿತ್ಯ ಸೃಷ್ಟಿಯಾಗದಿದ್ದರೂ ಆದ ಸೃಷ್ಟಿ ಬಲು ಹುಲುಸಾಗಿದೆ. ಇವರು ಸುರಿತ ಲೇಖಕರು.

# ಕ್ರಾಂತಿಗೆ ಆಹ್ವಾನ

೧

ಮನುಜನುದ್ಧಾರಕ್ಕೆ ಹರಣವನೆ ಪಣಕಿಟ್ಟ
ಆ ಹುತಾತ್ಮರ ನೆನಹು ನಿಲಿಸಿ ಫಲವೇನು?
ಬಡತನದ ಬೇಗುದಿಗೆ ಬಾಳನ್ನೆ ಬಲಿಗೊಟ್ಟ
ಮೃತರ ಆತ್ಮಕೆ ಶಾಂತಿ ಕೋರಿ ಫಲವೇನು?

೨

ಸಾಸಿರದ ಜನುಮಗಳು ಶ್ರೀಯುತರ ಸೇವೆಯಲಿ
ಸವೆದರೂ ಬಡತನವು ಸವೆದುದಿಲ್ಲ—
ಜೀತಕ್ಕೆ ಆಳಾಗಿ ಬಾಳೆಲ್ಲ ದುಡಿದರೂ
ಮಧ್ಯಮರ ಬಾಳ್‌ಬವಣೆ ಮುಗಿದುದಿಲ್ಲ.

೩

ಉಣಲನ್ನ, ಮೈಗೆ ಹೊದೆ, ಮಳೆಗಾಳಿ ಚಳಿ-ಬಿಸಿಲ
ಬಾಧೆಯಿಂದುಳಿದು ಬಿರಿಮನೆಯ ನೆರಳು—
ಇಷ್ಟೆ ಮನುಜನ ಬಾಳು, ಇದಕು ಗತಿಯಿಲ್ಲದೊಡೆ
ಅದು ನರನ ಬಾಳಲ್ಲ, ನಾಯ ಬಾಳು!

೪

ಆಯಾಸವಿಲ್ಲದಲೆ ಆಗರ್ಭಶ್ರೀಯುತರ
ಮಹಲಿಗೇರುವುವು ಉಪ್ಪರಿಗೆ ಏಳು—

ಕಲ್ಲುಗಳ ಕಟಿಕಟಿದು ಗಚ್ಚು - ಗಾರೆಯ ಹೊತ್ತು
ಬಳಲಿದರ ತಲೆಗಿರದು ಮನೆಯ ನೆರಳು!

೫

ದುಡಿವವರು ಕೋಟಿ ಜನ, ಒಡೆಯರೋ ನಾಲ್ಕು ಜನ
ಇವರೆ ಇಂದಿನ ಜಗದ ಸಮ್ರಾಟರು,
ಉಳಿದವರು ಊಳಿಗದಿ ಜನುಮವನು ಸವೆಸುತ್ತ
ಉಳ್ಳವರ ಕಣಜಕ್ಕೆ ಕಾವಲಿಹ ಭಟರು.

೬

ಮರೆಯಾದ ಮಾತುಮರ ದಿವ್ಯಬೋಧನೆ ಮರೆತು
ಉದರಸೇವೆಯು ಅವರ ಹೊಗಳಿಕೆಯು ಸಾಕು—
ಬಡವ - ಬಲ್ಲಿದರೆಂಬ ಭೇದವಿರದಿಹ ನಾಕ
ಈ ಜಗದಿ ನಿರ್ಮಿಸಲು ನವಕ್ರಾಂತಿ ಬೇಕು!

೭

ಕ್ರಾಂತಿ ಜೀವನ ಧರ್ಮ, ಕ್ರಾಂತಿ ಪ್ರಕೃತಿಯ ನಿಯಮ
ಕ್ರಾಂತಿ ಜಡದಲಿ ಹರಿವ ಚೈತನ್ಯ ಸರಿತೆ—
ಕಸದ ಕೊಳೆ ಅಳಿಸುತಲಿ, ರಸದ ಫಲ ಬೆಳೆಸುತಲಿ
ಹೊಸ ಆಶೆ ಹೊಸ ಹುರುಪುಗಳ ಸುಗ್ಗಿ ತರದೆ?

೮

ಋತುಚಕ್ರ ಗತಿಯಿಂದೆ ಜಡಪ್ರಕೃತಿಯಲಿ ಕ್ರಾಂತಿ
ಅದರಿಂದೆ ತಳೆಯುವುದು ಸೃಷ್ಟಿನವಕಾಂತಿ --

ನಿಸ್‌ಸತ್ವ – ನಿಸ್‌ಸಾರವಾದುದೆಲ್ಲವನಳಿದು
ನವಸೃಷ್ಟಿ ಬೆಳಗುವುದು ತಳೆದರುಣಕಾಂತಿ.

೯

ರಚನೆಗೊಳ್ಳಲಿ ನಾಡು ಅರ್ಥ ಸಮತೆಯ ಹದಕೆ
ಹಸನುಗೊಳ್ಳಲಿ ನಾಡ ಬಡಜನರ ಬದುಕು
ಅಶನ – ವಸನದ ಚಿಂತೆ ಹರಿದೊಮ್ಮೆ ನಾಡಿನಲಿ
ಸಂತೃಪ್ತಿ – ಸಂವೃದ್ಧಿಗಳು ನೆಲಸಬೇಕು.

೧೦

ದುಡಿಮೆಯಿಂದಲೆ ಜಗದಿ ಸಕಲ ಸಿರಿ – ಸಂಪತ್ತು
ದುಡಿಮೆಯಿಂದಲೆ ಜಗದಿ ಹಕ್ಕು ಜೀವಿಸಲು —
ದುಡಿಮೆಯುತ್ಪಾದನೆಯು ದುಡಿವರೆಲ್ಲರ ಸೊತ್ತು
ದುಡಿವವರೆ ಧಣಿಗಳೈ ತಿಳಿದು ಭಾವಿಸಲು.

೧೧

ಏಳು ನಾಡಿನ ತರುಣ, ಕರೆಯುತಿದೆ ಶ್ರಮಿಕಜನ
ನೀನೆ ಸಮತೆಯ ಯುಗದ ಕ್ರಾಂತಿಕಾರ —
ಅನ್ಯಾಯಗಳ ಮೆಟ್ಟು, ವಿಷಮತೆಯ ತಲೆಕುಟ್ಟು
ನೀನೆ ನಾಳಿನ ಜಗದ ಬಲುಹುಗಾರ!

— ಎಚ್. ಜೆ. ಉಪಾಧ್ಯಾಯ

# ಶಮೀ ಶಮಯತೆ ಭೀತಿಮ್

೧

ದುಶ್‌ಶಕ್ತಿಗಳ ಸತ್ಯ ಶಿವಶಕ್ತಿಯಿಂದದುಮಿ
ಹೊಸ ಗೆಲುವತರಲಿಂದು ವಿಜಯದಶಮಿ—
ವಿಧ್ವಂಸ ರಾಕ್ಷಸನ ತುಳಿದು ಬಾ ದೇವಿ ಶಮಿ!
ಕರುಣಿಸುತೆ ಶಾಂತತೆಯ ಅಮೃತರಶ್ಮಿ.

೨

ಶತಮಾನಗಳ ಸತ್ಯ ಸಾಹಸದ ಇತಿಹಾಸ
ಬರೆಯುತಿದೆ ಶಿವಶಕ್ತಿ ವಿಜಯ ಕಥೆಯ
ಲೋಕ ಹಿಂಸೆಕರಾದ ಖಳರ ಕೊಬ್ಬಿದ ಮದವ
ಧೀರತೆಯಲಿದಿರಿಸುವ ಸತ್ವಕಭಯ.

೩

ಮುಷ್ಟಿಯುದ್ಧದಿ ಮಲ್ಲಗಾಳೆಗದಿ ಪುಂಡರನು
ಹಿಂಡಿ ಹಿಪ್ಪೆಯಗೊಳಿಸಿ ಮೆರೆದೆವಂದು—
ತತ್ವನಿಷ್ಠೆಯ ಭೀಷ್ಮ ಪಣದಿಂದೆ ಮಾರ್ಮಲೆದು
ಉನ್ಮತ್ತ ಕುಟಿಲತೆಯ ಮುರಿಯಬೇಕಿಂದು.

೪

ದೇಶ ಧರ್ಮದ ನ್ಯಾಯ ನೀತಿ ವಿದ್ರೋಹಿಗಳ
ಸೊಕ್ಕು ಸವರಿದೆವೆಂದು ಶಸ್ತ್ರಬಲದಿಂದೆ—
ಸಾಮ್ರಾಜ್ಯ ಲೋಭಿಗಳ ಭೀಕರ ಪ್ರಪಾತಗಳ
ಎದುರಿಸಲುಬೇಕೆಂದು ನಿಶ್ಚಲತೆಯಿಂದೆ.

೫

ಅಣು ಬಾಂಬು, ಜಲ ಜನಕ, ಮೊದಲಾದ ಬಾಂಬುಗಳ
ವಿಧ್ವಂಸ ವಿಪ್ಲವವು ನಿಲ್ಲಬೇಕು—
ವಿಶ್ವ ಕ್ಷೇಮಕ್ಕಾಗಿ ದುಡಿದು ದಣಿಯುವ ಜನಕೆ
ಶಾಂತಿ ಸಹಕಾರಗಳು ಸಲ್ಲಬೇಕು.

೬

ಜಾತಿ ಮತಗಳ ಕೊಳಕು ಕೊಳ್ಳಗಳ ತಡೆಹಾಯ್ದು
ವರ್ಣಭೇದದ ಕಿಚ್ಚು ಕಾಡುಗಳ ತೊಡೆದು
ಪೂರ್ವ ಪಶ್ಚಿಮವೆಂಬ ಕೃತಕ ಗಡಿಗಳ ದಾಟಿ
ವಿಶ್ವ ನಾಗರಿಕತೆಯು ತುತ್ತು ತುದಿಯನು ಮುಟ್ಟಿ

೭

ಪ್ರೇಮತೀರ್ಥದಿ ಮಿಂದು ಮಾನವತೆ ಒಂದೆಂದು
ವಿಶ್ವಶಾಂತಿಯ ಗುರಿಗೆ ತಪಿಸಬೇಕೆಂದು
ಶಾಂತಿ ಸಮನಿಸಿದಂದು ಹಿರಿಯನವಮಿ
ಅಂದೇ ಮಾನವ ಕುಲದ ವಿಜಯದಶಮಿ.

೮

ಶಮೀ ಶಮಯತೇ ಭೀತಿಂ ಶಮೀ ಶತ್ರು ವಿನಾಶಿನೀ
ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶಿನೀ
ಆದಿರಾಜಾ ಮಹಾರಾಜಾ ವನರಾಜಾ ವನಸ್ಪತೇ
ಇಷ್ಟದರ್ಶನಮಿಷ್ಟಾರ್ಥಂ ಕಾರ್ಯಸಿದ್ಧಿ ಫಲಂಭವೇತ್

— ಎಚ್. ಜಿ. ಉಪಾಧ್ಯಾಯ

---

**ಕವಿಯ ಪರಿಚಯ :—** ಕ್ರಾಂತಿಗೆ ಆಹ್ವಾನವನ್ನಿತ್ತ ಕವಿಗಳು ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ ಎ. ಇವರು. ಇವರು ಕಿನ್ನಾಳದವರು. ಈಗ ಹೈದರಾಬಾದಿನ ಚಾದರಘಾಟ ಕಾಲೇಜಿನಲ್ಲಿ ಮಹೋಪಾಧ್ಯಾಯರಾಗಿದ್ದಾರೆ. ಇವರ ಕ್ರಾಂತಿದರ್ಶಿ ವಿಚಾರಗಳು ಎಷ್ಟೋ ಜನರ ಮೆಚ್ಚುಗೆಗೆ ಪಾತ್ರವಾಗಿವೆ.

# ಶಂಭೋ ಶಂಕರ

ಶಂಭೋ ಶಂಕರ ಶಿವ ಶಿವ ಶಂಕರ
ಶಂಭೋ ಶಂಕರ ಶಿವ ಶಿವ ಶಂಕರ ॥ ಅ. ಪ. ॥

ನಟ: ರುದ್ರಭೀಕರ, ಅತಿಗಂಭೀರ;
ನಟಿ: ಸೌಮ್ಯಸುಂದರಾಕಾರ. ॥ ಪ ॥

ನಟ: ಜಗದ ಹುಟ್ಟಿಗೂ ಮೊದಲೆ ಪ್ರಕೃತಿ ಯೊಡ-
ನಾಟ ಹೂಡಿರುವೆ ದೇವ
ದಿವ್ಯ ದೃಷ್ಟಿಯೇ ಸಾಕು ಜೀವರನು
ಕುಣಿಯತೊಡಗಿಸಿದೆ ದೇವ ॥ ೧ ॥

ನಟಿ: ಜಡತೆಯಲ್ಲಿ ಚೈತನ್ಯ ತುಂಬಿ, ಜೀ-
ವನದಿ ಚೆಲುವಿನಲೆ ಚೆಲ್ಲಿ
ಅಡವಿಯೆಲ್ಲ ರಸ ಹಸುರಿನಲ್ಲಿ ಸಿರಿ
ಸೊಬಗ ಸುರಿಸಲಿಹವಲ್ಲಿ ॥ ೨ ॥

ನಟ: ಜೀವಕಳೆಯಿಲ್ಲದಲೆ ಬತ್ತಿಹೋಗಿಹ ಜೀವ-
ಕೊಳವಂದು ತುಂಬಿತ್ತು ನೋಡು
ಚೈತನ್ಯರಸದಲ್ಲಿ ಮಿಂದು, ಹುಲುಕಡ್ಡಿಗಳು
ಹಾಡಿದುವು ಜೀವಿಗಳು ಹೊಸತು ಹಾಡು ॥ ೩ ॥

ನಟಿ: ಜೀವನದ ವಿಧವಿಧದ ಭಂಗಿಯಲಿ ಜೀವಿಗಳ
ಕುಣಿಸುತಿಹೆ ಓ ಮಹಾ ನಾಟ್ಯಕಾರ....
ಚಿತ್ರಭಿತ್ತಿಯ ಮೇಲೆ ಭಾವ ಕುಂಚವ ಪಿಡಿದು
ನಗೆಹೊಗೆಯ ಸುಳಿ ಚಿತ್ರಿಸುವೆ, ಚಿತ್ರಕಾರ ‖ ೪ ‖

ನಟ: ರಚಿಸುತಿಹೆ, ಕೆಡಿಸುತಿಹೆ; ಕೂಡಿಸುವೆ, ಅಗಲಿಸುವೆ
ನೀನೊಬ್ಬ ಬುವಿಯ ಹಿರಿಯಾಟಗಾರ
ನಿಮಿಷವೊಂದರಲಳಿಸಿ, ಮರುನಿಮಿಷದಲಿನಗಿಸಿ
ಮತ್ತೆ ನಿಶ್ಶಬ್ದತೆಯು ಮಂತ್ರಗಾರ ‖ ೫ ‖

ನಟಿ: ನೀನಂದು ಕಣ್‌ಬಿಟ್ಟು ಬಳಿಕ ಮರೆಯಾದೆಯೈ
ಎಲ್ಲಿಯಡಗಿದೆ ದಿವ್ಯ ಪುರುಷ
ಪ್ರಕೃತಿಯೊಡಲಲಿ ತಮವು ಸುತ್ತಿ ನರ್ತಿಸುತಿಹುದು
ನೀಬೇಗ ಬಾ ನವ್ಯ ಪುರುಷ ‖ ೬ ‖

ನಟ: ಸತ್ತ್ವವಡಗಿತೇ ರಜವು ಉಡುಗಿತೇ
ಹೋಯಿತೇನು ಬೆಳಕೆಲ್ಲ ?
ಚೆಲುವುಬೇಕು, ಐಕ್ಯತೆಯು, ಬಾಳಿನಲಿ
ಬೇರೆ ಬೇರೆ ಬೇಕಿಲ್ಲ ‖ ೭ ‖

ನಟಿ: ಯಾವ ತಾಯಿಯ ಕೊರಲ ಮಾಂಗಲ್ಯ ಹರಿಯಿತೈ
ಏನು ರೋದನೆ ನಮ್ಮ ಹೃದಯದಲ್ಲಿ
ಮೆಟ್ಟುಕೆಟ್ಟಿದನು, ನೀ ಕಟ್ಟುಬಾ ಶಿವಪೂರ್ಣ
ಭಾವಮಾಂಗಲ್ಯವನು ಬದುಕಿನಲ್ಲಿ ‖ ೮ ‖

ನಟ: ಬರಲಿ ಬೆಂಕಿ ಹಣೆಗಣ್ಣನೊಡೆದು
ಓ ರುದ್ರ, ಭೀಕರಾಕಾರ
ಸುಡುವುದೆಲ್ಲವಂ ಸುಟ್ಟುಬಿಟ್ಟು ಶುಭ–
ಸತ್ಯಬೀರು ಸಾಕಾರ ॥ ೯ ॥

ಕುಣಿಕುಣಿದು ಬಾ ನಿನ್ನ ಪ್ರಲಯತಾಂಡವ ರಚಿಸಿ
ದಿಕ್ತಟಕು ಬಿತ್ತರಿಸು ಶಂಭೋ
ಒಳಿತೊಂದನೇ ಉಳಿಸಿ, ಅಶಿವನೆಲ್ಲವ ನುಂಗಿ
ಬಾನು ಬುವಿಯಂತರವ ತುಂಬೋ ॥ ೧೦ ॥

ನಟ: ರವಿಕಿರಣಗಳ ಬೆಳಕು, ಬರಿ, ಜಗವ ಸುತ್ತದೆಯೆ
ನಮ್ಮುಸಿರಿನೊಳಗಿಳಿದು ಬರಲಿ
ಶಿವ ಬೆಳಕು ಬರಲೆದೆಯು ಬೆಳಗಿ ತೊಳಗಲು ದಿವ್ಯ
ಶೂನ್ಯ ನೆಲಸಿರೆ ಸಚ್ಚಿದಾನಂದ ತರಲಿ ॥ ೧೧ ॥

—'ರವಿ'

---

**ಕವಿಯ ಪರಿಚಯ:**—'ರವಿ' ಎಂಬ ಕಾವ್ಯನಾಮದಿಂದ ಕವನಗಳನ್ನು ರಚಿಸುತ್ತಿರುವ ತರುಣಕವಿಗಳಾದ ಶ್ರೀ ದೇವೇಂದ್ರಕುಮಾರ ಹಕಾರಿ, ಎಂ. ಎ. ಇವರು ರಾಯಚೂರು ಜಿಲ್ಲೆಯವರು. ಸಧ್ಯ ಹೈದರಾಬಾದಿನ ಉಸ್ಮಾನಿಯಾ ವಿಶ್ವ ವಿದ್ಯಾಲಯದಲ್ಲಿ ಕನ್ನಡದ ಅಧ್ಯಾಪಕರಾಗಿದ್ದಾರೆ. ಇವರ ಎಲ್ಲ ಕವನಗಳು ಭಾವ. ಪೂರ್ಣವಾಗಿವೆ.

# ನಾಡಿನಲಿ ಒಲವೆಂದು ಮೂಡಬಹುದು!

ಜಾತಿಮತ ಪಂಗಡದಿ ಮಾತ್ಸರ್ಯ ಬೆಳೆಯುತಿರೆ
ಜಗವು ಪ್ರಗತಿಯ ಪಥವ ಕಾಣುವುದು ಎಂತು?
ಜನರ ಮನಮನದಲ್ಲಿ ವೈಷಮ್ಯ ಹೆಚ್ಚುತಿರೆ
ಜನವು ಸೊಗದಲಿ ಬಾಳಿ ಬದುಕುವುದು ಎಂತು? ೧

ರೋಷ ದ್ವೇಶದ ಜ್ವಾಲೆ ವಿಪರೀತ ವ್ಯಾಪಿಸುತ
ನೂರು ನಾಲಗೆ ಚಾಚಿ ದಹಿಸುತಿಹುದು
ಹೃದಯದಾಳದಿ ಹೊಕ್ಕು ಭಾವಗಳ ಸುಡುತಲಿರೆ
ಒಡಲಳಲ ನಾನಿನ್ನು ಹೇಳಬೇಕೇ? ೨

ಒಂದೆ ತಾಯಿಯ ಮಕ್ಕಳೆಂದು ಉಸುರುತ್ತ
ಮಲತಾಯಿ ಮಗನಂತೆ ಕಾಣಬೇಕೆ?
ಒಂದೆ ನಾಡಿನ ಜನರು ನಾವೆಂದು ಸಾರುತ್ತ
ಅನ್ಯೋನ್ಯ ವೈರವನು ಬೆಳಸಬೇಕೆ? ೩

"ಗಾಸಿಯಾಗಲು ಹೃದಯ ಕೊರಗಬೇಡೈ ಕಂದ
ಸರಿಪಡಿಸದೇ ಬಿಡನು ಜಗದ ತಂದೆ"
ಎಂದಿಂತು ಬಗೆಬೀಣೆ ಎಡೆಬಿಡದೆ ನುಡಿಯುತಿರೆ
ಆತ್ಮಕ್ಕೆ ಸಾಂತ್ವನವು ದೊರಕುತಿಹುದು ೪

“ ತಲೆ ತುಂಬ ಪಾಂಡಿತ್ಯ ಒಲವಿನರ್ಥಕೆ ಶೂನ್ಯ-
ರಾಗಿ ಬಾಳ್ವರ ಕಂಡರೆನಗಾಗದು ”
ಎಂದು ಹೇಳುವ ಕವಿಯ ಅನುಭವದ ವಾಣಿಯಿದು
ಅಕ್ಷರಕ್ಷರ ಸಹಿತ ಸತ್ಯವಹುದು ೫

ವೈದುಷ್ಯ ಮೂರ್ತಿಗಳು ವಿಷಮತೆಯ ಕಾರುತಿರೆ
ಪಾಮರರ ಗತಿಯೆಂತೊ ? ಕೇಳಬೇಕೆ ?
ಅಹುದಾದರಹುದೆನ್ನಿ ಸಲ್ಲದಿರೆಹೊಲ್ಲ
ಕಂಡದ್ದು ಕಂಡಂತೆ ಕಂಡರಿಸಿದೆ ೬

ನಮ್ಮ ನಮ್ಮವರಲ್ಲಿ ಭೇದಭಾವನೆಯಿರಲು
**ನಾಡಿನಲಿ ಒಲವೆಂದು ಮೂಡಬಹುದು !**
ನಮ್ಮ ಜನಗಳ ಬದುಕು ಈ ರೀತಿಯಾಗಿರಲು
**ನಮ್ಮ ನಾಡೆಂದೊಂದುಗೂಡಬಹುದು !** ೭

— ಶರಣುಬಸವ ಜಾವಳಿ

**ಕವಿಪರಿಚಯ :—** ಶ್ರೀ ಶರಣುಬಸವ ಜಾವಳಿ ಇವರು ಹೊಸದಾಗಿ ಸಾಹಿತ್ಯ ಪ್ರಪಂಚದಲ್ಲಿ ಕಾಲಿಟ್ಟರೂ ಒಳ್ಳೆಯ ಕವನಗಳನ್ನಿತ್ತು ಪ್ರಸಿದ್ಧಿಯನ್ನು ಹೊಂದುತ್ತಲಿದ್ದಾರೆ. ಇವರು ಎಂ. ಎ., ವಿದ್ಯಾರ್ಥಿಗಳು. ಇವರಿಂದ ಇನ್ನೂ ಹುಲುಸಾದ ಕೃಷಿಯಾಗಬೇಕಾಗಿದೆ.

# ಬೆಳ್ಳಿಯ ಚಿಕ್ಕಿ

(ನವ ಮನ್ವಂತರದ ಆಗಮನವನ್ನು ಸೂಚಿಸಿ ಬರೆದುದು.)

ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ಪ ॥
ಹಿಂದಿನ ಹಗಲಿನ ಬೆಳಕನು ಮುಕ್ಕಿ,
ತಿಂಗಳ ತಂಪನು ಬಾಡಿಸಿ ನೆಕ್ಕಿ
ಸಂಜೆಯ ಕೆಂಜೆಡೆ ಬಾಲವ ಬಿಚ್ಚಿ
ರಾವಣ ಹಾವಳಿ ನಡೆಸುತ ಸೊಕ್ಕಿದ
ಭೀಷಣ ರಾತ್ರಿಯ ನೆತ್ತಿಯ ಕುಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೧ ॥

ಕರಾಳ ಕತ್ತಲೆ ಹಡೆದಿಹ ಭೂತ
ಉಫ್ ಎಂದುಸುರಿಡೆ ಎದ್ದುವು ಪ್ರೇತ
ಪಂಜಿನ ಸಾಲ್ಗಳು ನಂಜಿನ ಕಂಗಳು
ನುಂಗಲು ಆಯೆನೆ ತಿಮಿಂಗಿಲ ಪಿತ್ತವು
ಏರಿದ ರಾತ್ರಿಯ ನೆತ್ತಿಯ ಕುಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೨ ॥

ನಾಡಿನ ಪುಣ್ಯವು—ಹಿರಿಮೆಯು, ಸೊತ್ತು
ಈ ಉನ್ಮತ್ತತೆಗೊಂದೇ ತುತ್ತು
ಮಾನವನೆದೆಯೊಳ ಪ್ರೇಮವ ಹೀರಿ
ಅಂತಃಸತ್ವದ ಮುಡಿ ಮಾಣಿಕ್ಯವ
ಕೀಳುತ ಮದಿಸಿದ ರಾತ್ರಿಯ ಕುಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೩ ॥

ಸ್ವಾರ್ಥದ ಹುತ್ತಿನೊಳಿದೊ ವಿಷಸರ್ಪ
ತಲೆಯೆತ್ತಿದೆ- ಬುಸುಗುಟ್ಟುವ ದರ್ಪ
ಕಾಳಿಂಗನ ಮಡುವಾಗಿದೆ—ವಿಶ್ವ
ಅಧಿಕಾರದ ಅಮಲೇರಿದ ಬುದ್ಧಿಗೆ
ಮಂಕನು ಕವಿಸಿದ ರಾತ್ರಿಯ ಕುಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೪ ॥

ಅರೆಬತ್ತಲೆ-ತುಂಬಿದ ಸಭೆಯೊಳಗೆ
ಅವಮಾನಿತ ಮಾನವತೆಯ ದ್ರೌಪದಿಗೆ
ರಕ್ಷೆಯ ಅಂಬರ ಅಕ್ಷಯ–ಎಂಬರ
ಶಿಲುಬೆಗೆ ಏರಿಸಿ ಪ್ರಾಣವ ತೆಗೆಸುತ
ಭಯ ನೆಟ್ಟಿರುಳಿನ ನೆತ್ತಿಯ ಕುಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೫ ॥

ನಿನ್ನೆಯ ಹೆಣಗಳ ಬಣಬೆಯನೊಟ್ಟಿ
ಮನ್ವಂತರಗಳ ಶ್ರೀಕಾರವ ಮೆಟ್ಟಿ
ಓಂಕಾರದ ಜೊತೆ ಹೋರುವ ಹಟದಿ
ಟಂಕಾರದ ದನಿ–ಮರುದನಿ ಗುಟ್ಟಿಪ
ದಾನವ ರಾತ್ರಿಯ ನೆತ್ತಿಯ ಕುಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೬ ॥

ಸಾಮ್ರಾಜ್ಯದ ಶೃಂಖಲೆಗಳ ಕಡಿದು
ಸಾಮಾನ್ಯರ ಶ್ರೀ ದೀಕ್ಷೆಯ ಪಡೆದು
ಮಾಲಿನ್ಯದ ನಿರ್ಮಾಲ್ಯವ ತೆಗೆದು

ಸ್ವಾರಾಜ್ಯದ ಪಾರಮ್ಯದ ಮೆರೆಯುವ
ಸಾಳೆಯ ನೇಸರನಾಶೆಯ ಬಿತ್ತಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೭ ॥

ಭಯ ಕಂಪನವಡಗಿತು—ಮಾನವನೆದೆಯ
ಛಲವಳಿಯಿತು, ಅದುರಿದ ತುಟಿಯ
ಮೇಲಾಡುವ ನಗೆ ಒಸೆದಿದೆ ಬಗೆಯ
ತೇಲಾಡುವ ಹೊಂಗನಸಿನ ಬೆಳೆಗಳ
ಹುಲುಸಾಗಿಸಿ, ನನಸಾಗಿಸೆ, ಒಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೮ ॥

ತಂಗಾಳಿಯು ಚಾಮರವಿಕ್ಕಿದೆ—ತಳಿ
ಬಂಗಾರದ ಹಾಕಿದೆ ಬೆಳಗಿನ ಚಳಿ,
ಅಂಗಾಂಗದಿ ಸೃಷ್ಟಿಯ ನವ ಚೇತನ
ಅರಳಿರೆ, ವೈನವಿರೇಳುವ ಚೆಲುವಿನ
ಮಂಗಲ ಕೋರಿವೆ ಹಾಡುವ ಹಕ್ಕಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೯ ॥

ತಳಕಿತ್ತಿತು ತಡ ಬಡಿಸುತ ಮಬ್ಬು,
ಬೆಳಕೇರಿತು, ಬಿಸಿಲಾಗುವ ಉಬ್ಬು
ಕೇಳಿಸಿತಿದೊ! ಸೂರ್ಯೋದಯ ಘೋಷ!
ಹೊಂದಾವರೆ ಈ ಜಗ-ಜೀವನ, ಉಷೆಯ
ಸಿಂಗಾರದಸ್ಮಿತದಾರುತಿಯೆತ್ತಿ ।
ಮೂಡಿದೆ ಆಗಲೆ ಬೆಳ್ಳಿಯ ಚಿಕ್ಕಿ ॥ ೧೦ ॥

— ಇರಾ

# ಕವಿರಾಜನ ಜೀವನ

ಜಗದ ದೇಗುಲದಲ್ಲಿ ದೇವ ಜಗುಲಿಯನರಿಸಿ
ನಗೆಬಗೆಯ ನರುಗಂಪಿನುಸಿರು ಸೂಸಿ,
ವಸುಮತಿಯ ಹಸುರಿನಲಿ ನಿತ್ಯವೂ ಹೊಸದೊಸಗೆ
ರಸಜೀವ ರಾಜೀವ ಸುಮನರಾಶಿ. ೧

ಪರಿಮಳವನುಸಿರುವುದು ನರನಾರಿ ಸಂತಾನ
ಸರಸರುಚಿರನ್ನಮಯ ಪಂಚಪ್ರಾಣ
ಜೀವ ಜೀವಗಳೊಳಗು ಹುದುಗಿಹುದು ಈ ಸವಿಯು
ಜೀವದೊಳಗಿಹುದು ಭಾವ ಸುಧೆಯು. ೨

ಇದನುಂಡು ಉಣಿಸುವರು ಸಿರಿವಂತೆ ಕಬ್ಬಿಗರು
ಬ್ರಹ್ಮಾಣಿ ಕಲ್ಯಾಣಿ ಸಿರಿವರದರು.
ಹೂನೀರ ಹನಿಯಾಗಿ ಝರಿಯಾಗಿ ತೊರೆಯಾಗಿ
ಸುಳಿದತ್ತ ಸೆಲೆನೆಲಿಸಿ ಸಾಂಗವಾಗಿ. ೩

“ ತಾಯ್ನಾಡು, ನೆರೆನಾಡು ನಾಡೆಲ್ಲ ನೆಲದಾಯಿ
ಶ್ರೀದೇವಿ ಭೂದೇವಿ ವಿಶ್ವದಾಯಿ! ”
ಸ್ನೇಹಮಯ ಕಲರವವು ಸೌಹಾರ್ದ ಸಂಗೀತ
ತೆರೆತೆರೆಗೆ ನವನಾಟ್ಯ ನೆಗೆತ ಕುಣಿತ. ೪

ರವಿಕಿರಣ ತೇಜಕ್ಕೆ ಶಶಿಕಿರಣದೋಜಕ್ಕೆ
ಕವಿಜೀವ ನದಿಗುಂಟು ಕಳೆಯ ನಿಧಿಯು.
ಹಗಲಿರುಳು ಎರಡು ದಡ ತೋಳುಗಳನೆತ್ತುತಲಿ
ಖಗಪತಿಗೆ ಸುಮ್ಮಾನ ಶುಭದಾಂಜಲಿ. ೫

ಎತ್ತರದ ಗಿರಿಶ್ರೇಣಿ ಸುತ್ತಲಿನ ಸೌಸೃಷ್ಟಿ
ಚಿತ್ತಹರ ಶೋಭನಕೆ ತುಳುಕಿ ಕುಲುಕಿ.
ಕವಿಜೀವ ವಾಹಿನಿಯು ಶೃಂಗಾರ ಭಂಗಿಯಲಿ
ಜಾಹ್ನವಿಯ ಧಾರಾಳ ಸರಣಿಯಲ್ಲಿ. ೬

ಬನದ ಕಾವಣದಲ್ಲಿ ಕುಮುದ ಮಂಜರಿ ಹಾಸ್ಯ
ಕ್ರೀಡಾವಿನೋದಕ್ಕೆ ಚಕ್ಕಂದದಾಟಕ್ಕೆ
ಕವಿಭಾವ ಅಪ್ಸರೆಯರಂಗಗಳಕ್ಕೆ
.... .... .... .... .... .... .... .... .... ೭

ಕಾಡಿನಲಿ ವನರಾಜ ನಾಡಿನಲಿ ನರಸಿಂಹ
ಕೇಡಿಗಳ ಕಡುವೈರಿ ಸುಜನರರಸು.
ಶಾರ್ದೂಲ ವೃತ್ತದಲಿ ದಿವ್ಯ ಕಾವ್ಯದ ಧರ್ತಿ
ಶೌರ್ಯ ಔದಾರ್ಯಗಳ ಭರ್ತಿಯಲ್ಲಿ ೮

ಹಸಿದೊಡಲ ಛಿಳಿಛಿಟಿಯ ಸಂತಾಪದುರಿಯಲ್ಲಿ
ಅಸಿ ಬೆಂದು ಸಿಡಿಮಿಡಿದು ಕಿಡಿಗರೆಯಲು.
ಪವನ ಝುಂಝಾನಿಲಯ ರುದ್ರವೀಣೆಯ ಗತಿಗೆ
ಕವಿವಾಣಿ ಕಣ್ಣೀರ ಧಾರೆಯಲ್ಲಿ. ೯

ಕುದಿಗಾಲ ದೆಸೆಯಲ್ಲಿ ಹಗಲಲ್ಲಿ ಕಾವಳವು
ಕೋಲ್ಮಿಂಚು ಜಡಿಮಳೆಯು ಭಯಂಕರವು
ನೆಲಮುಗಿಲು ಭಣಭಣವು ಎದೆಯೊಡೆದ ಕುದುಕರಿಗೆ
ತಿಳಿನುಡಿಯ ಕವಿಗೀತ ಧೃತಿದಾನವು. ೧೦

ನಾಯಿ ಬದುಕಿನ ಸಂತೆ ಎಂಜಲಕೆ ತುಟಿ ಕುಣಿಸಿ,
ಅಭಿಸಾರವನು ಬಯಸಿ ತಿಮಿರವಾಸಿ
ಬೀಭತ್ಸ ಲೋಲುಪರ ತಿಪ್ಪೆಗಳನಚ್ಚಳಿಸಿ
ಆಭಾಸು ತೊಳೆಯುವದು ಕಾವ್ಯ ಧ್ವನಿಯು. ೧೦

ರಕ್ತ ಬೀಜರ ಹುಯಿಲು ಹಗಲಾಡು ನರಬಲಿಯು
ದೇಶಕೋಶದ ಸುಲಿಗೆ ಹಗೆಯು ಹೊಗೆಯು
ಬಡತನದ ಬಿಡುಗಡೆಗೆ ಹೆಣಗಿದೊಡೆ ಬೀರಿ ಹೆಣ
ಅರೆಜೀವ ನಿರ್ಜೀವ ಮಸಣಮೌನ. ೧೨

ಹೆರವರಿಗೆ ನೆಲವುಳುಗಿ ಪೀಳಿಗೆಗೆ ಪಡಿಗೂಳು
ಸೆರೆಯಲ್ಲಿ ನೆಲದಾಯಿ ಶೋಕಮೂಕಿ
ರಸಜೀವ ಕುದಿದೆದ್ದು ಸೋದರರನೆರ್ಬಿಸುವ
ಅಸಿ ಧಾರೆಯುಮರನುಡಿ ಸಂಜೀವಿನಿ. ೧೩

ಬಾಳ ಕಾಳಗದಲ್ಲಿ ಸೋಲ ಬಯಸುವರಾರು?
ಅದನರಿಯದವರಾರು – ಸೈ – ವಿರಳರು
ನೋವನೆಲ್ಲವ ತೋಡಿ ಭಾವಗೀತೆಯ ಹಾಡಿ
ಕಾವನಡಿಯಲ್ಲಿ ದೃಢ ಕವಿರಾಯನು. ೧೪

ಜನನ ಉನ್ನತದಲ್ಲಿ ಅವನಿಯಲಿ ಜೀವನವು
ಇದು ಋಣದ ಅನುಬಂಧ ಭವಭೋಗವು
ವಸನ ಋಣ ತೀರಿಸಲು ಕಸವುಡುಗಿ ರಸವೀವ
ಋಷಿಜೀವ ಕವಿಭಾವ ಶಾಂತ ಸಿಂಧು! ೧೫

ಸ್ವಾನಂದ ಸ್ವಚ್ಛಂದ ನವರಸಗಳಾ ಸ್ವಾದ
ಗಾನ ಮಂಜುಲನಾದ ಪರಮ ಮೋದ
ಜನಪದದ ಜೀವಾಳ ಜೀವನಕ್ಕೆ ಚೈತನ್ಯ,
ವರ ಕವಿಯು ಗಾಂಗೇಯ ಮುಕ್ತ! ಧನ್ಯ!! ೧೬

— ರಾ. ಭಿ. ಮನಸಬ್ದಾರ

**ಕವಿ ಪರಿಚಯ:—** ಶ್ರೀ ಮನಸಬ್ದಾರ ರಾಘವೇಂದ್ರರಾಯರು ಸುರಪುರದವರು. ಸಧ್ಯ ಹೈದರಾಬಾದಿನಲ್ಲಿ ವಾಸವಾಗಿದ್ದಾರೆ. ಇವರು ರಸಿಕ ಕವಿಗಳು. ಯಾವ ಆಡಂಬರವಿಲ್ಲದೆ ತಮ್ಮ ಸಾಹಿತ್ಯ ಸೇವೆಯನ್ನು ಸಾಗಿಸುತ್ತ ಬಂದಿದ್ದಾರೆ.

# ಮಾನ್ಯ ಮಾನವ

ಮನುಜನಿಗೆ ಗುಣಬೇಕವಾವೆನೆ ।
ವಿನಯ ವಿದ್ಯೆಯು ಬುದ್ಧಿ ಜ್ಞಾನವು ।
ಧನವಗಳಿಸುವ ಜಾಣ್ಮೆ ಸಜ್ಜನರೊಡನೆ ಸಹವಾಸ ॥
ಮನವು ನಿರ್ಮಲ, ದಯುವು ಧರ್ಮವು ।
ವಿನುತ ಮಾನವು ಕುಟಿಲವಿಲ್ಲದ ।
ಘನತೆ ಭಗವದ್ಭಕ್ತಿಯಿರಲವ ಮಾನ್ಯನೆನಿಸುವನು ॥ ೧ ॥

ಕಾಮಿನಿಯರನು ಕಂಡು ಹೆದರುತ ।
ಕಾಮ ಕ್ರೋಧಗಳಳಿದು ನಡೆಯುತ ।
ನೇಮದಿಂ ನಿಜ ಧರ್ಮ ಕರ್ಮವ ಬಿಡಿದೆ ಪಾಲಿಸುತ
ಭೂಮಿಯೊಳಗಿಹ ಜನರ ಕಾಣುತ ।
ಪ್ರೇಮ ಬಂಧುಗಳಂತೆ ನಂಬುತ ।
ಈ ಮಹಾ ಸದ್ಗುಣದಿ ಮೆರೆಯುವನವನೆ ಮಾನಯುತ ॥೨॥

ಪರರ ಹಿತವನು ಬಯಸುತಿರುವನು ।
ಪರಧನವನಪಹರಿಸಿಕೊಳ್ಳನು ।
ಪರಮ ಪುರುಷಾರ್ಥವನು ಸಾಧಿಪ ಪಾಪಬಾಹಿರನು ॥
ಕರುಣ ವಿತರಣ ವಿಜಯಶೀಲನು ।
ಹರಣದಾಶೆಯನುಳಿದು ಚರಿಪನು ।
ಎರಗಿದವರನು ಬಿಡದೆ ಪಾಲಿಪ ಮಾನ್ಯ ಮಾನವನು ॥ ೩ ॥

— ಶ್ರೀಗಳು

ಕವಿ ಪರಿಚಯ — ‘ಮಾನ್ಯ ಮಾನವ’ ರನ್ನು ಕಾಣಬಯಸುವ ಶ್ರೀಗಳು ಶ್ರೀ. ಮ. ಚ. ಶಾಂತವೀರ ಸ್ವಾಮಿಗಳು ಚೌದಾಪುರಿ ಹಿರೇಮಠ ಕಲಬುರಗಿ ಇವರು. ಇವರ ವಿಶಾಲದೃಷ್ಟಿ, ಕಾರ್ಯದಕ್ಷತೆ ಪ್ರಸಿದ್ಧವಾದುವು.

# ತಾಯೆ !

ಓ ತಾಯೆ ಮಮತೆಯ ಮೂರ್ತಸ್ವರೂಪ ನೀ ತಾಯೆ !
ತಾಯೆಂಬ ನುಡಿಯಲೆಷ್ಟು ತಣಿವಿಹುದು
ತಾಯೆಂಬ ನುಡಿಯಲ್ಲಿ ಸ್ವರ್ಗೀಯ ಸಂಗೀತ
ತಾಯೆಂದು ನುಡಿವ ನಾಲಗೆಯೆ ಧನ್ಯ !
ಒಮ್ಮೆ ತಾಯೆಂದು ನುಡಿಯೆ, ಹೃದಯವೀಣೆಯ ರವದಿ,
ನೂರುಮಡಿ ಮಾರ್ದನಿಯು ಮೊಳಗಿ ಮೈ ಮರೆಸುವದು
ಕಣ್ಣೊಳಗೆ ಕಾರುಣ್ಯ ಮೂರುತಿಯು ಮೂದಲಿಸಿ ಅಮರನರ್ತನದಿಂದ
ಮನವ ಸೆಳೆಯುವದು.
ತೃಪ್ತಿಯಲಿ ತೇಲಾಡುವದು ಮನ !
ತಾಯೆ ! ತಾಯೆ ! ತಾಯೆಂದು ನೂರುಸಲ ನುಡಿದರೂ
ನಾಲಗೆಗೆ ತಣಿವಿಲ್ಲ ದಣಿವಿಲ್ಲ.

ನುಡಿದಷ್ಟು ನೂತನದ ಅನುಭವವು !!
ಓ ತಾಯೆ ನಿನ್ನ ಹೆಸರು ಕೇಳುತಲೆ ಹಸಿವೆ ನೀರಡಿಕೆ
ಒಂದೊಂದೆ ಅಡಗುವವು ತಮ್ಮಿಂದ ತಾವೆ.
ಓ ತಾಯೆ! ನೀ ಮಾನವಳೆ? ಅಲ್ಲಲ್ಲ ಅಕ್ಕರೆಯ
ರೂಪದಿಂದವತರಿಸಿ ಮರ್ತ್ಯಕ್ಕೆ ಬಂದ ದೇವತೆ ನೀನು!
ವಿಶ್ವದೊಳಗಿನ ಸಾರಭೂತ ಪ್ರೇಮತತ್ವವೆ ನೀನು!
ವಿಶ್ವ ಜನಕಳು ನೀನು! ವಿಶ್ವ ವಂದ್ಯಳು ನೀನು!!
ಅತ್ಯಧಿಕ ವಂದ್ಯಳೈ ನೀನೆನಗೆ ತಾಯೆ!
ಓ ತಾಯೆ ನಿನ್ನ ಔದಾರ್ಯಕೆಣೆಯಿಲ್ಲ.
ನಿನ್ನ ದಯೆಯಾಳವೆಷ್ಟಿಹುದೊ ಯಾರು ತಿಳಿದವರಿಲ್ಲ.
ಅಂತವರಿತವರಿಲ್ಲ, ಅಳತೆಗೈದವರಿಲ್ಲ! ಆಗಸದ
ಅನಂತತೆಯೆ ನೀನು, ಮೇರೆ ಮೀರಿದ ಮಹಾಸಾಗರವೆ
ನೀನು! ಮೇರುವಿನ ಔನ್ನತ್ಯ ಶಿಖರ ನೀನು.
**ಓ ತಾಯೆ! ಆದಿಮಾಯೆ!**

— ಮಲ್ಲಿಕಾರ್ಜುನ ಮುಸ್ಕಿ

---

**ಕವಿ ಪರಿಚಯ** — ಶ್ರೀ ಮಲ್ಲಿಕಾರ್ಜುನರು ಮುಸ್ಕಿಯವರು. ಉದಯೋನ್ಮುಖ ಕವಿಗಳು. ಇವರ ಈ 'ತಾಯಿ' ಎಂಬ ಕವನ ಭಾವಪೂರ್ಣವಾಗಿದೆ. ತಾಯಿಯ ಘನತೆಯನ್ನು ಚೆನ್ನಾಗಿ ಚಿತ್ರಿಸುತ್ತದೆ.

# ವಿಶ್ವಶಾಂತಿ

ಏಳಿರೆಮ್ಮಯ ನಾಡ ಬಂಧುಗಳೊಂದುಗೂಡಿಽ ನಡೆಯುವಾ ॥
ಬಂಧುಭಾವನೆ ಬೆಳೆಸಿ ಎಮ್ಮಯ ನೊಂದ ಜಗವನು ಕಟ್ಟುವಾ ॥ ಪ ॥

ಸೂರ್ಯನೊಬ್ಬನು, ಚಂದ್ರನೊಬ್ಬನು । ಒಂದೆ ಧರಣಿಽ ಮಂಡಲ ॥
ಆರ್ಯಧರ್ಮವು ಒಂದು, ದೇವನು । ಒಬ್ಬ, ಗುರಿಯೂ ನಿಶ್ಚಿತ ॥ ೧ ॥

ಜಾತಿ, ಮತ, ವರ್ಣಗಳನೆಣಿಸದೆ । ನೀತಿ ಮಾರ್ಗವ ತೊರೆಯದೆ ॥
ಖ್ಯಾತಿಯಿಂದಲಿ ಮೆರೆದ ನಾಡಿನ । ಜ್ಯೋತಿಯನು ನಾವ್ ಬೆಳಗುವಾ
॥ ೨ ॥

ಸತ್ಯಽಹಿಂಸೆಯ ದಿವ್ಯ ಬಾವುಟ । ನಿತ್ಯದಲಿ ತಾ ಮೆರೆಯಲಿ ॥
ಬತ್ತಿ ಹೋಗಿಹ ಪ್ರೇಮಸೆಲೆಯದು । ಮತ್ತೆ ಮನದಲಿ ಹರಿಯಲಿ ॥ ೩ ॥

ಬಾಳು, ಬಾಳ್ವೆಯ ಬೆಳಕು ಕಾಣಲಿ । ಬಾಳ ಸೊಬಗನು ಸವಿಯಲಿ ॥
ಬಾಳೊಣೆಲ್ಲರು ಬಂಧುಗಳ ತೆರ । ಬಾಳ್ವೆಗಿದು ಗುರಿ ಖಂಡಿತ. ॥ ೪ ॥

ವಿಶ್ವವೆಲ್ಲವ ಒಂದುಗೂಡಿಸೆ । ವಿಶ್ವಪ್ರೇಮವ ಬೆಳೆಸುವಾ ॥
ವಿಶ್ವಶಾಂತಿಯ ಗುರಿಯ ಸಾಧಿಸೆ । ವಿಶ್ವತೋಮುಖರಾಗುವಾ ॥ ೫ ॥

— ಎಂ. ಜಿ. ಕುಲಕರ್ಣಿ

---

ಕವಿ ಪರಿಚಯ:— ಶ್ರೀ ಎಂ. ಜಿ. ಕುಲಕರ್ಣಿಯವರು ನಗನೂರಿನವರು. (ತಾ. ಸುರಪುರ) ಇವರು ಕೆಂಭಾವಿ, ಶಹಪುರ ಮತ್ತು ರಂಗಂಪೇಟೆಯ ಖಾದಿ ಕೇಂದ್ರಗಳ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಉದಯೋನ್ಮುಖ ಲಾವಣಿಕಾರರು. ಈ ಕವನದಲ್ಲಿ ಇವರು ‘ವಿಶ್ವ ಶಾಂತಿಗಾಗಿ’ ಹಂಬಲಿಸುತ್ತಿರುವುದನ್ನು ಕಾಣಬಹುದು.

# ವಿ ರ ಕ್ತ *

ಸಂಪದವು ನನಗೊಂದು ಬೆಲೆಬಾಳದಾ ವಸ್ತು,
ಪ್ರೇಮವನು ಕಡೆಗಣಿಸಿ ನಗುವೆ ನಾನು.
ಕೀರ್ತಿಕಾಮನೆಯೆನಗೆ ಕೇವಲ ಹುಸಿಯ ಕನಸು,
ಚೆದರಿ ಹೋಯಿತು ಕಂಡು ಮುಂಬೆಳಗನು.

ಪ್ರಾರ್ಥನೆಯ ಮಾಡಿದೊಡೆ, ಇನಿತು ಮಾತ್ರವೆಯೆನ್ನ
ತುಟಿಗಳನು ನಲುಗಿಸುವುದೊಲವಿನಿಂದ :
" ನಾ ಧರಿಪ ಹೃದಯವನು ಬಿಟ್ಟುಕೊಡು ಕರುಣೆಯೆಲಿ,
ಇರಲು ಬಿಡು ಎನ್ನ ನೀ ಸ್ವಾತಂತ್ರ್ಯದಿಂದ. "

ಬಾಳು ತಾ ಕೊನೆಯ ಮೆಟ್ಟಲನು ಮುಟ್ಟುತಲಿರಲು
ಇದುವೆ ಪ್ರಾರ್ಥನೆ ಮಾಳ್ಪುದೆನ್ನ ಜೀವ—
" ಬಾಳಿನಲಿ ಸಾವಿನಲಿ ಮುಕ್ತ ಆತ್ಮವದಿರಲಿ
ಕಷ್ಟ ಸಹಿಸುವ ಧೈರ್ಯವೀಯೊ, ದೇವ! "

— ಶ್ರೀಪತಿ

---

* ಎಮಿಲಿ ಬ್ರಾಂಟಿ ಇವರ "Old Stoic" ಎಂಬ ಕವಿತೆಯ ಅನುವಾದ.

**ಕವಿ ಪರಿಚಯ**— ಶ್ರೀ ಶ್ರೀಪತಿ ಸರ್ನಾಡ್ ಬಿ. ಎ. ( ಆನರ್ಸ್ ) ಇವರು ಮಳ್ಳಿ ( ತಾ. ಜೇವರಗಿ ) ಯವರು. ಕಲಬುರ್ಗಿಯ ಉನ್ನತ ಶಾಲೆಯಲ್ಲಿ ಶಿಕ್ಷಕರು. ಇವರು ಉದಯೋನ್ಮುಖ ಕವಿಗಳು.

# ಆಶೆ

೧

“ ಆಶೆಯಿಲ್ಲದ ನರನು ದೇಶವನು ಗೆದ್ದಾನು ! ”
ಈ ಶಪಥವಾಣಿಯನು ಕೇಳಿ ಬೆರಗಾಗಿ,
ಆಶೆಯೊಂದೊಂದನೇ ಘಾಸಿಮಾಡುತ ಬಂದೆ,
ಆಶೆಯನು ನಿರ್ಮೂಲಗೊಳಿಸದಾದೆ.

೨

ಬಾಳಬೇಕೆಂಬಾಶೆ, ಬಾಳುವೊಡೆ ಉಣುವಾಶೆ,
ಅಳಿಯದಿಹ ಕೀರ್ತಿಯನು ಗಳಿಸುವಾಶೆ,
ತಿಳಿದು ತಿಳಿಯದೆ ಇಂತು ದಾಳಿಡುವ ಬಯಕೆಗಳು,
ಮೂಲೆ ಮೂಲೆಗೂ ಇಣಿಕಿ ಅಣಕವಾಡೆ

೩

ಶಾಂತಿಯನು ಬಯಸುತ್ತ ಭ್ರಾಂತನಂದದಿ ಸುತ್ತಿ,
ಅಂತವಿಲ್ಲದ ವೇದ ವೇದಾಂತ ತಿಳಿದು,
ಅಂತರಂಗದ ಶುದ್ಧಿ ಅಂತರಾತ್ಮನ ವಿದ್ಯೆ
ಇಂತೆರಡು ಕೂಡಿಬರೆ ಲೇಸೆಂದನು.

— ರಘೂತ್ತಮ

---

**ಕವಿ ಪರಿಚಯ :—** ಹಿರಿಯಾಶೆಯನ್ನು ಇಟ್ಟುಕೊಂಡು ಹೊರಟ ನೂತನ ಕವಿಗಳು ಶ್ರೀ ಪಾಲ್ಮಾರ್ ರಘೂತ್ತಮಾಚಾರ್ಯ, ಬಿ. ಎ., ಇವರು. ಇವರ ವಾಸಸ್ಥಳ ಸುರಪುರ. ಮತ್ತು ಅಲ್ಲಿಯ ಉನ್ನತ ಶಾಲೆಯಲ್ಲಿಯೇ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಂದಲೂ ಕನ್ನಡದ ಕೆಲಸ ಸಾಕಷ್ಟು ಆಗಬೇಕಾಗಿದೆ.

# ನಿರೀಕ್ಷಣೆ

ಕೆಲಸ ಮುಗಿದ ಬೆಸ್ತನೊಬ್ಬ
ದಣಿದು ದಿನದ ಕಡೆಗೆ ಮಲಗಿ
ಗಾಢ ನಿದ್ರೆಯೊಳಗೆ ದಣಿವ ಮರೆಯುತಿದ್ದನು.
ದಿನವು ಕಾಣುತಿದ್ದ ನಲ್ಲ–
ನಂದು ಕಂಡುಬರದೆ ಇರಲು
ತರುಣಿಯೊಬ್ಬಳಲ್ಲಿಯಿಲ್ಲಿ ಅರಸುತಿರ್ದಳು.

ತಲೆಯ ಮೇಲೆ ಮೋಡ ಕವಿದು
ಭರದಿ ಮಳೆಯು ಸುರಿಯುತಿರಲು
ಮನದೆ ಅಂಜಿ ಮೈಯು ಬೆವತು ನಡುಗುತಿರ್ದಳು
ಕಲ್ಲು ಮುಳ್ಳನೆಡವಿ ಬಿದ್ದು
ಹೊರಗೆ ರಕ್ತ ಹೊಮ್ಮುತಿರಲು
ಪಂವೆ ಮಾಡದವನ ಕುರಿತು ಕೂಗುತಿರ್ದಳು

ಹುಡುಕಿ ಬಳಲಿ ಸಿಗದೆ ಅವನು
ಸುತ್ತಮೌನ ಕವಿದು ಇರಲು
ನದಿಯ ನಡುವೆ ಕಲ್ಲನೇರಿ ನಿಂತು ಇರ್ದಳು
ಅವಳು ನಿಂತು ಇದ್ದ ಕಲ್ಲ
ಬಳಸಿ ನೀರು ಹೆಚ್ಚುತಿರಲು
ಅವಳಿಗದರ ಅರಿವು ಇಲ್ಲದಂತೆ ಇರ್ದಿತು.

ಹೊಳೆಯು ತುಂಬಿ ಹರಿದು ಬಂದು
ನಲ್ಲನಿದಿರು ನೋಡುತಿದ್ದ–
ಳವಳ ಸೆಳೆದು ತಬ್ಬಿ ಮುಂದೆ ಜವದಿ ಸಾಗಿತು
ಗಾಳಿಯೊಡನೆ ಲೀನವಾಗಿ
ಇಂದು ಕೂಡ ಕಲ್ಲಮೇಲೆ
ಅಂದಿನಂತೆ ನಲ್ಲೆಯುವನನರಸುತಿರ್ಪಳು.

— ಕಸ್ತೂರಿ

**ಕವಿ ಪರಿಚಯ**— ಶ್ರೀ ಹಾರತಿ ಕಸ್ತೂರಿ, ಬಿ. ಎಸ್‌ಸಿ., ಇವರ ವಾಸಸ್ಥಳ ಗದ್ವಾಲ. ಸಧ್ಯ ಇವರು ಸುರಪುರದ ಉನ್ನತ ಶಾಲೆಯಲ್ಲಿ ಶಿಕ್ಷಕರು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಹೊಸದಾಗಿ ಕಾಲಿಟ್ಟವರು. ಆದರೂ ನಿರೀಕ್ಷಿಸದೇ ಇದ್ದ 'ನಿರೀಕ್ಷಣೆ' ಇವರದಾಗಿದೆ.

# ನಾಡಹಬ್ಬ

ಕನ್ನಡದ ಜನವೆಲ್ಲ ಒಮ್ಮನದೆ ತಾವ್ ಕಲೆತು,
ನಲ್ಮೆಯಿಂದಲಿ ನಾಡಹಬ್ಬ ಮಾಡಿ.
ಕನ್ನಡದ ಜನತೆಯಲಿ ನವಚೇತನವ ತರಲು,
ಸೋದರರೆ ಉತ್ಸಹದಿ ಕೂಡಿ ಬನ್ನಿ. ೧

ಕನ್ನಡದ ಏಳಿಗೆಯೆ ನಮ್ಮ ಗುರಿ ಎಂದೆನುತ,
ಆನಂದದಿಂದ ಸಾಹಸವ ಮಾಡಿ.
ಹರಿದು ತುಂಡಾಗಿರುವ ನಾಡನ್ನು ಕೂಡಿಸಲು,
ವಿಜಯ ದಶಮಿಯ ದಿನವೆ ದೀಕ್ಷೆ ತೊಡಿರಿ. ೨

ಕನ್ನಡದ ಬಾವುಟವ ನಭದಿ ಹಾರಿಸಿ ಮೆರಸೆ,
ಕನ್ನಡದ ಕಲಿಗಳೇ ಓಡಿಬನ್ನಿ.
ಕನ್ನಡಮ್ಮನ ಯಶೋಗೀತೆಯನು ಹಾಡಲ್ಕೆ,
ಕನ್ನಡದ ಕವಿಗಳೇ ಓಡಿ ಬನ್ನಿ. ೩

— 'ಕಮಲಸಂಭವ'

**ಕವಿ ಪರಿಚಯ**—ಪ್ರತಿವರುಷವೂ ನಾಡಹಬ್ಬವನ್ನು ಆಚರಿಸುತ್ತ ಬಂದು, ಸ್ಫೂರ್ತಿಗೊಂಡು 'ನಾಡಹಬ್ಬ'ದ ಮೇಲೆಯೇ ಕವನವನ್ನು ರಚಿಸಿದ ನೂತನ ಕವಿಗಳಾದ ಶ್ರೀ ಕಮಲಸಂಭವರು ರಂಗಂಪೇಟೆಯವರು. ಇವರ ಪೂರ್ತಿ ಹೆಸರು ಶ್ರೀ. ಎಂ. ಆರ್. ಬುದ್ಧಿವಂತಶೆಟ್ಟಿ 'ಕನ್ನಡ ಜಾಣ'. ಇವರು ಒಳ್ಳೆಯ ಸಾಹಿತ್ಯಾಭ್ಯಾಸಿಗಳು.

# ಹಳಬರು

ಹಳಬರನ್ನು ಹೊಸಬರಿಂದು
ತಿಳಿಯುದೆಂತೊ ಹಳಿವರು;
ಹಳಬರೆದೆಯೊಳಿರುವ ಬಾಳ–
ಬೆಳಕನಿವರು ಕಾಣರು! ೧

ಹಳೆಯ ಶಿಲ್ಪಿ ಜಕ್ಕಣಾರ್ಯ
ಕಲೆಯೊಳೆನಿತು ಕುಶಲನು!
ಅಳಿಯುದಂಥ ಕಲೆಯನಿವನು
ಇಳೆಯೊಳಿರಿಸಿ ಪೋದನು. ೨

ರನ್ನ, ಪಂಪ, ಹರಿಹರಾದಿ
ಹೊನ್ನ, ರಾಘವಾಂಕರು.
ಕನ್ನಡದಲಿ ಕಾವ್ಯ ರಚಿಸಿ
ಮನ್ನಣೆಯನು ಪಡೆದರು. ೩

— ಆರ್. ಎಸ್. ಹಿರೇಮಠ

**ಕವಿ ಪರಿಚಯ:**— ಶ್ರೀ ಆರ್. ಎಸ್. ಹಿರೇಮಠ ಇವರು ಸುರಪುರ ತಾಲೂಕಿನ ಕಲ್ಲುದೇವನ ಹಳ್ಳಿಯವರು. ಸಧ್ಯ ರುಕ್ಕಮ್ಮಾಪೇಟೆ (ಸುರಪುರ) ಯ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕರು. ಹಳಬರ ಮಹತಿಯನ್ನು ವರ್ಣಿಸಿದ ಇವರು ಸಾಹಿತ್ಯಕ್ಷೇತ್ರದಲ್ಲಿ ಇನ್ನೂ ಹೊಸಬರು.

# ಕಮಲ

ಸರಸಿಜ, ವರಕುಸುಮ ಕೋಮಲ
ತೆರೆಗಳಲಿ ರಂಜಿಸುತ ನಿರ್ಮಲ
ಕೆರಳಿಸುವಿ ಜನರ ಕುತೂಹಲ
ಓ ಮಾನವ ಶೃಂಗಾರಿಣಿ!

ಅರುಣ ಮಯವು ನಿನ್ನ ವರ್ಣ
ಸುರುಚಿರ ಪರಿಮಳ ಸುಪೂರ್ಣ
ಮೆರೆಯುವಿ ಸರಸಿಯಲಿ ಪೂರ್ಣ
ಓ, ಸುಗಂಧ ಸುಹಾಸಿನಿ!

ನಿನ್ನ ಮುಖವು ಕಲೆಯ ಲೀಲೆ!
ಚೆನ್ನ ಶಶಿಯ ಕಿರಣ ಮಾಲೆ!
ಸನ್ನುತ ವರ ಭ್ರಮರ– ಶೀಲೆ!
ಓ, ಸೊಬಗಿನ ಸುಂದರಿ!

— ಎಂ. ಜಿ. ರಸೂಲ್

---

**ಕವಿ ಪರಿಚಯ :—** ಕಮಲದ ಕೋಮಲತೆಯನ್ನೂ, ಸೌಂದರ್ಯವನ್ನೂ ಬಣ್ಣಿಸಹೊರಟ ನೂತನ ಕವಿಗಳಾದ ಶ್ರೀ ಗುಲಾಮ ರಸೂಲರು ರಂಗಂಪೇಟೆಯವರು. ಸುರಪುರದ ಸಹಕಾರ ಸಂಘದ ಆಫೀಸಿನಲ್ಲಿ ಕಾರಕೂನರು. ಇವರ ಒಂದೆರಡು ಲಾವಣಿಗಳೂ ಜನಪ್ರಿಯವಾಗಿವೆ. ಕನ್ನಡ ಮಾತೃಭಾಷೆಯಲ್ಲದ ಇವರು ಕನ್ನಡದಲ್ಲಿ ಬರೆಯುತ್ತಿರುವುದು ಒಂದು ವಿಶೇಷ.

# ಸಪ್ತಾರ್ಭಕರು

ಶುಭಕರ ನೀತಿಯು
ಪಳಗಿಸೆ ಜಂಪತಿ
ಸಮೂಹವೆಸೆಯಿತು
ಬುವಿಯನು ಬೆಳಗಿತು. ೧

ಸತ್ಯಶ್ರೀಯನು
ಮೆಚ್ಚಿಸಿ ಮೋದವ
ಹರಡಲು ತಿರೆಯಲಿ
ಮಕ್ಕಳಪಡೆದರು. ೨

ಸಾವಿಗೆ ಮಣಿಯದೆ
ವಾಜಶ್ರವಸನ
ಕಂದನು ಕೋರಿದ
ಕುಶಲವ ಧರಣಿಗೆ. ೩

ಎಳೆಯನು ಮುಗುದನು
ಸುನೀತಿ ತನಯನು
ತಪವನು ಗೈದನು
ತೇಜವ ಕಂಡನು. ೪

ಸುನೀತಿಯಣುಗನು
ಸಾರಿದ ಜಗದಲಿ
ಭಗವತ್ತೇಜವಿ–
ದೆಲ್ಲೆಡೆಯೆನುತಲಿ. ೫

ಮಾತಾ ಪಿತೃಗಳ
ಸೇವೆಯಲೊರಗಿದ
ಶ್ರವಣನು ಸೂರ್ಯನ
ವಂಶವ ಬೆಳಗಿದ. ೬

ಸಿಂಹ ಕಿಶೋರನ
ಬಾಯನು ತೆರೆಯಿಸಿ
ಹಲ್ಗಳನೆಣಿಸಿದ
ಬಾಲನು ಭರತನು. ೭

ಕಿರೀಟಿ ತನಯನು
ಕಣದಲಿ ವೀರ್ಯಕೆ
ಕಿರೀಟವಿಟ್ಟನು
ಕೀರ್ತಿಯ ಪಡೆದನು. ೮

ಜನಕನು ಹಿಂದಿರೆ
ತನುಜನು ಚಿನ್ಮಯ–
ಮಯಶುಕನಿಳೆಯಲಿ
ಚರಿಸುತ ಮೆರೆದನು. ೯

ಸಪ್ತಾರ್ಭಕರಿವ–
ರೆಮ್ಮಯ ಸಂಸ್ಕೃತಿ
ಗಾಗರವಾದರು
ಮಂಗಲಮಯರು. ೧೦

— ಪಿ. ಗುಂಡಾಚಾರ್ಯ

**ಕವಿ ಪರಿಚಯ** — ಶ್ರೀ ಪಿ. ಗುಂಡಾಚಾರ್ಯ, ಎಂ. ಎ. ಇವರು ಸುರಪುರದ ಉನ್ನತ ಶಾಲೆಯಲ್ಲಿ ಶಿಕ್ಷಕರು. ಒಳ್ಳೆಯ ಬರೆಹಗಾರರು. ಕನ್ನಡಕ್ಕಾಗಿ ಸಾಧ್ಯವಾದ ಸೇವೆ ಸಲ್ಲಿಸಬೇಕೆಂದು ಹವಣಿಸುವವರಲ್ಲಿ ಇವರೂ ಒಬ್ಬರು. ಇವರ ಸ್ವಂತ ಊರು ಸುರಪುರ.

# ದೈವದೊಲುಮೆ

" ದೈವ ! " ಎಂದೊಡೆ ದೈವತಾನೊಲಿದು ಬರಬಹುದೆ ?
" ದೇವ ! " ಎಂದರೆ ದೇವ ಒಲಿದು ಬಹನೆ ?
ದೇಹವನು ತಪಿಸುತ್ತೆ ಕಾರ್ಯಸಿದ್ಧಿಯ ಪಡೆಯೆ
ದೇವ, ಕರುಣೆಯ ತೋರಿ ಫಲವೀವನು.

ಇದನು ತಿಳಿಯದೆ ನರನು ಉದರ ವೈರಾಗ್ಯದಿಂ—
ಮದ-ಮೋಹವಳಿಯದಲೆ ಕಾರ್ಯರತನಾಗಿ,
ಕುದಿದು, ಕೊರಗುತೆ ಹರಣ ಪಣಕಿಟ್ಟೊಡೇನಹುದು !
ಎದೆಯ ಹಿರಿಯಾಶೆಯದು ಫಲಿಸಬಹುದೆ ?

ಸತ್ಯ ಕರ್ಮವಗೈದು ಸತ್ವವನೆ ಬೆಳೆಸುತಲಿ
ನಿತ್ಯದಲಿ ತಪಿಸಬೇಕೆಮ್ಮ ತನುವ
ಚಿತ್ತ ಭೂಮಿಯು ಫಲಿಸಿ ಧನ್ಯತೆಯ ಪಡೆದಾಗ
ಎತ್ತಿಕೊಳ್ಳುತೆ ಬರುವುದಾದೈವ ಒಲಿದು.

— ರೇವಣಯ್ಯ

**ಕವಿ ಪರಿಚಯ**— ಶ್ರೀ ರೇವಣಯ್ಯನವರು ತಿಮ್ಮಾಪುರ ( ರಂಗಂಪೇಟೆ ) ದವರು. ಇವರು ಯಾಳಗಿಯಲ್ಲಿ ಶಿಕ್ಷಕರು. ಇವರು ನೂತನವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟಿದ್ದಾರೆ.

# ಬಿರುಗಾಳಿ

ಆರು ಬರುಸದ ಹಿಂದೆ ಉದ್ಭವಿಸಿದಾ ಗಾಳಿ
ಘೋರ ಸರಗೈಯುತಲಿ ಬೀಸಿ ಕೊನೆಗೆ,
ಕ್ರೂರ ಪ್ರಲಯವನೆಸಗಿ ಬ್ರಹ್ಮಾಂಡದಲ್ಲೆಲ್ಲ
ಸೂರೆಗೊಂಡಿತು ಬುವಿಯ ಸತ್ವ ಸಾರ ೧

ಎಷ್ಟು ಅದರಬ್ಬರವು! ಝೇಂಕಾರವೇನು?
ಎಷ್ಟು ಕರ್ಕಶರೂಪ! ಸೆಣಸಾಟವೇನು?
ಕಷ್ಟದುರಿವೊಗ ತಾಳಿ ನೃತ್ಯ ಮಾಡುತ ತನ್ನ
ದುಷ್ಟ ರೂಪವ ತಳೆದು ಗುಡುಗಾಡಿತು ೨

ಭೋರೆಂಬ ಶಬ್ದವಂ ಕೇಳಿ ನಡುಗಿದುವೆಲ್ಲ
ಭೂರುಹಗಳೀತೆರದಿ ಮೊರೆಯಿಟ್ಟವು.
ಸೈರಿಸೆವು ಹೇ ದೇವ! ಸಾಯುವಾಟವಿದೇನು?
ತೂರಿ ಬರುತಿಹ ಗಾಳಿ ಸೀಳುತಿಹುದು ೩

ಬಿರುಗಾಳಿ ಹೊಡೆತಕ್ಕೆ ನಭಚರರು ಗರಗರನೆ
ತಿರುಗಿದರು ತಿರುಗಣಿಯ ಮಡುವಿನಲ್ಲಿ;
ಕುರಿ ಹಿಂಡುಗಳ ಬಳಗ ಪಟಪಟನೆ ಮಡಿದುವೈ
ಕರಿ ತುರುಗ ವಾಹನಗಳಡಗಿದವು ನೆಲದಿ ೪

ಹೆಮ್ಮರಗಳಲ್ಲಲ್ಲಿ ಉರಿದೆದ್ದು ಮಲಗಿದವು
ಕಿಮ್ಮೀರ ಕೀಚಕರು ನಶಿಸಿದಂತೆ
ಒಮ್ಮತದ ಲವಲೇಶವಿಲ್ಲದಕೆ ಬಿರುಗಾಳಿ
ಹೆಮ್ಮೆಯಿಂದಲಿ ಬೀಸಿ ನಗೆಯಾಡಿತು ೫

ವಲಯಗಳ್ನಡುಗಿದವು ರೌದ್ರನರ್ತನ ನೋಡಿ,
ಕಲಕಿ ಕಲುಷಿತವಾಯ್ತು ಜಲಧಿಯೊಡಲು;
ಮಲಿನಮುಖ ತೋರುವಂತಾಯ್ತು ಆಗಸದೇವಿ,
ಹೊಳೆಯುತಿಹ ರವಿ ತಾನು ಮಸಕಾದನು ೬

ಕಟ್ಟಡಗಳುರುಳಿದುವು, ಸುಟ್ಟು ಮಸಿಮಯವಾದ
ಪಟ್ಟಣಗಳಲ್ಲಲ್ಲಿ ಮರೆಯಾದುವು;
ಸೃಷ್ಟಿ ತೊಟ್ಟಿಲವಲುಗಿ ಉಯ್ಯಾಲೆಯಾಡುತಲಿ
ಕೆಟ್ಟೆ, ಏನಿದು ಬವಣೆ! ಎಂದು ಮರುಗಿ. ೭

ಪವನನಬ್ಬರ ಕಂಡು ನಚಿಕೇತನೋಡಿ ಬರೆ
ಬುವಿ ಬೆಂದು ಬೆಂಡಾಯ್ತು ನಿಮಿಷದಲ್ಲಿ
ಕವಿದುಬಿಟ್ಟಿತು ಮಸಣ ಶಾಂತಿಯೆಲ್ಲೆಲ್ಲಿಯೂ
ಸವಿಯೂಟ ಸುಖನಿದ್ರೆ ಕನಸಾದುವು ೮

ಧ್ವಜಪಟಗಳುರುಳಿದುವು, ಮಕುಟ ನೆಲ ನೋಡಿದುವು
ಸೃಜಿಸಿದಲ್ಪೈಶ್ವರ್ಯ ಮರೆಯಾದುವು
ವ್ಯಜನವಾಯಿತು ಪಲಲ ವೃಂದಕೀ ಬಿರುಗಾಳಿ
ಸುಜನ ಮನ ಬಿಸುಸುಯ್ದು ಗೋಳಿಟ್ಟಿತು ೯

ಗುರಿಗೆಟ್ಟು, ಗರಿಗಟ್ಟಿ ಬೀಸಿದಾ ಬಿರುಗಾಳಿ,
ಕರುಣವಿಲ್ಲದೆ ಮರಣ ತಂದೊಡ್ಡಿತು.
ಸುರಿಸಿದರು ಕಂಬನಿಗಳಲ್ಲಲ್ಲಿ ವಿಧವೆಯರು,
ಮರುಗಿ ಬೊಬ್ಬೆಯನಿಟ್ಟರೆಷ್ಟೋ ಜನರು ೧೦

ತಂಪೆಸಗಲಾಗಾಗ ' ಶಾಂತಿದೂತ ' ನ ತೆರದಿ
ತಂಪು ಮೇಘಗಳಲ್ಲಿ ಹರಿದು ಬರಲು,
ಹೆಂಪು ತೋರಿತು ತನ್ನ ಕ್ರಾಂತಿ ಕಾಳಿಯನೂದಿ
ಹೆಂಪಳಿಸಿತ್ತೈ ಸಕಲ ಮೇಘ ಮಾಲೆಗಳ ೧೧

ಮಿತಿಮೀರಿ ನಡುಗಿಸಿತು ಗತಿಗೆಟ್ಟ ಜನಕೆಲ್ಲ
ಹಿತವೇನು ತನಗಾಯ್ತೊ ತಿಳಿಯಲಿಲ್ಲ
ಅತಿ ಹಿತನು ತಾನೆನುತ ಮರೆ ಮೋಸವಂ ತಳೆದು
ಖತಿಗೀಡು ಮಾಡಿತ್ತೈ ಸಕಲ ಜನವ. ೧೨

ಪಾರ್ಥಿವದ ನಭವಮಾಸದರ್ಧದಲಿ ಕೊನೆಯಾಯ್ತು
ವ್ಯರ್ಥ ವೈರವ ತಳಿದು ಹಣ್ಣಾಯಿತು;
ಸಾರ್ಥಕತೆ ಪಡೆಯಲಿನ್ನಾದರೂ ತಿಳಿವುಟ್ಟಿ,
ವ್ಯರ್ಥ ಹೋರಾಟ ಮುಂದಾಗದಂತೆ ೧೩

ಕೇಸರಗಳಿಲ್ಲಿಯೂ ಕೇಳದಂತಿರಲಿನ್ನು
ಬಾಸರಗಳಲ್ಲಲ್ಲಿ ಉಲಿಯುತಿರಲಿ
ಹೇಸಿ ಕಾರ್ಯಕೆ ಮನವನೆಳೆಸುವಂತಹ ಬುದ್ಧಿ
ಏಸು ಜನ್ಮಕು ಬೇಡ, ದೇವ ದೇವ! ೧೪

ನಿಜಶಾಂತಿ ಬರಲಿನ್ನು ಸ್ವಪ್ನಶಾಂತಿಯು ಬೇಡ,
ವಿಜಯ ಹಗೆಯಲಿ ಬೇಡ ಮನಗೆಲ್ಲಲಿ!
ವ್ಯಜನವಾಗಲಿ ಸಕಲ ವಿಶ್ವಕೀ ಬಿರುಗಾಳಿ
ಸೃಜಿಸಲೆಲ್ಲೆಡೆಯಲ್ಲಿ " ಅಮರಶಾಂತಿ "! ೧೫

— ಇಂದಿರೇಶ

# ಸಗರನಾಡಿಗೆ ಬಾ!

ಸಗರನಾಡಿನಾ ಸೊಬಗನು ಸವಿಯಲು
ಜಗಜಗ ಓಡುತ ಬಾಬೇಗ
ಜಗದಲಿ ಪೆಸರಾಗಿಹ ವರ ಸೀಮೆಗೆ
ಮಗನಾ—ಕರೆಯುವೆ ಸಾಗೀಗ.

ಗಗನಕೆ ಹಾರುವ ವೃಕ್ಷಗಳೆಲ್ಲವು,
ಮುಗಮುಗಿಸುತ ತಾವಂದದಲಿ
ಖಗಮಿಗಗಳ ಬೇಸರವನು ಕಳೆಯಲು
ಮಿಗಿಲಾಗಿಹವೀ ಬೀಡಿನಲಿ.

ಗಿರಿಗಳು ಆಗಸದೇವಿಯ ಚೆಲುವನು
ಬಿರಿಬಿರಿ ನೋಡುತಲಿಹವಿಲ್ಲಿ!
ಗಿರಿಕಂದರದಲ್ಹರಿಯುವ ಕೊಳಗಳು
ಸಿರಿತೋರುತ ತಾವಿಹವಿಲ್ಲಿ!

ಗಿಳಿಕೋಗಿಲೆ ಬಕನವಿಲು ಮನೋಹರ
ಇಳೆಯೊಳಗಿರುವಂತಿವೆ ನೋಡು
ಬಿಳಿಗೊಳದಾವರೆ ತರತರಪೂಗಳು
ಬಳಿಕಿದಲ್ಲವೇ? ಚೆಲುನಾಡು!

ಸಗರನಾಡಮ್ಮನ ಮೈಯನು ತೊಳೆಯಲು
ಮಿಗಿಲಾಗಿಹ ಹೊಳೆ ಹರಿಯುವವು
ಸೊಗಸಿನಾಂಬರವನುಡಿಸಲು ಬನಸಿರಿ
ಬಗೆಬಗೆ ರೂಪವ ಧರಿಸುವಳು.

ಕಬರಿಯು ಕಟ್ಟಿಲು ತರತರದ್ಹೂಗಳ
ಸೊಬಗಿನ ಮಾಲೆಗಳಾದರದಿ
ವಿಬುಧ ಮಾನ್ಯಳಾಗಿಹ ನಮ್ಮಮ್ಮಗೆ
ಶುಭ ಸಿರಿ ರಮಣಿಯು ತರುತಿಹಳು.

ತೀರ್ಥವು ಬೇಕೇ ? ಮಂದಾಕಿನಿಯಿದೆ
ಸಾರ್ಥಕವಾಗಲು ಈ ಜನುಮ
ಪಾರ್ಥ ಪಾಂಡವರ ಬಂಡೆಯು ತಾ ವರ
ತೀರ್ಥವೆಂದು ಪೆಸರಾಗಿಹುದು.

ಪರಮೇಶ್ವರಕೊಳ ಶೀಲವಂತಗುಡಿ
ವರಬಸವಾರ್ಯನ ಗದ್ದುಗೆಯು
ಸಿರಿಗವಿರಂಗನ ಮಂದಿರಮೇಣ್ ಬಲು
ಹರುಷದ ತಾವರೆಗೆರೆ ಇಹುದು.

ಇತಿಹಾಸದ ನೆನಹನು ತಾ ಚಿಮ್ಮಲು
ಗತಿಸಿದ ವಿಭವದ ಕಿಲ್ಲೆ ಇದೆ
ಮತಿಗೆಟ್ಟವರಾ ಮತಿಯನು ಬೆಳಗಲು
ಗತಿನೋಡಿರಿ ? ಎಂದೆನ್ನುತಿದೆ.

ಸುರಪುರ ಶಹಪುರ ತಿಂಥಿಣಿ ಸನ್ನತಿ
ವರಪುರಗಳು ತಾವಿಹವಿಲ್ಲಿ !
ಪರಮಾತ್ಮನನಾರಾಧಿಸೆ ನಿಶಿದಿನ
ಗಿರಿಗುಹೆ ಮಂದಿರವಿಹವಿಲ್ಲಿ.

ಚೆಲುವಿನ ನಾಡು ಸೊಬಗಿನ ಬೀಡು
ಬಲುಸೋಜಿಗದಾ ವರನಾಡು
ಬಲುಮೆಯು ಮಾಳ್ಪಿನು ಕವನಮನೋಹರೆ !
ಚೆಲುವನು ತೋರುತನೀನ್ನಾಡು.

ದಂಡಿಗೆ ಬೆತ್ತವ ಧರಿಸುತಮೆರೆದಿಹ
ಪಂಡಿತಮಾನ್ಯರ ನೆಲೆವೀಡು
ದಂಡುಪದಾತಿಯು ಕಲಿತನಬೆಳಗಿಹ
ಮಂಡಲೇಶ್ವರರ ಕಾಯ್ನಾಡು.

ನಿನ್ನಯ ನಲುಮೆಯ ವರಕವಿಗಳುಇರೆ
ಮನ್ನಿಸಿಬರುವುದು ಲೇಸಲ್ಲೆ ?
ಕನ್ನಡ ಕವಿತಾಮಾಲೆಯ ಹೆಣೆಯಲು
ಮನ್ನಿಸೆ, ಮಗನಾನಿಹೆನಿಲ್ಲೆ.

ಶ್ರೀಮದ್ವೇದನಿಧೀಂದ್ರರು ಜನಿಸಿದ
ನಿರ್ಮಲಕಾಂತಿಯು ವರನಾಡು !
ಶಾಮಲಕುಂತಲ ಶೋಭಿತಲಲನೆಯೆ
ಕಾಮಿನಿ ಕವನಗಳೀಡಾಡು ! !

— ಇಂದಿರೇಶ

**ಕವಿ ಪರಿಚಯ :—** 'ಇಂದಿರೇಶ' ಎಂಬ ಕಾವ್ಯನಾಮದಿಂದ ಕವನಗಳನ್ನು ರಚಿಸಿ ಈಗಾಗಲೇ ಕನ್ನಡಿಗರಿಗೆ ಪರಿಚಿತರಾದ ಕವಿಗಳು, ಶ್ರೀ ಸಗರ ಕೃಷ್ಣಾಚಾರ್ಯ, ಬಿ. ಎ., ಇವರು. ಇವರು ಸಾಹಿತ್ಯರಂಗದಲ್ಲಿ ಸೇವೆಸಲ್ಲಿಸುತ್ತಿದ್ದಂತೆ ಶಿಕ್ಷಣರಂಗದಲ್ಲಿಯೂ ದಕ್ಷ ಮುಖ್ಯಾಧ್ಯಾಪಕರಾಗಿಯೂ, ಶಿಕ್ಷಣಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ; ಸಲ್ಲಿಸುತ್ತಿದ್ದಾರೆ. ಇವರ ವಾಸಸ್ಥಳ ಶಹಪುರ.

# ಶಹಪುರದ ತಾವರೆಕೆರೆ

ಹೊರಗಣ್ಣು ಒಳಗಣ್ಣುಗಳನೆರಡನೂ ತಣಿಪ
ಆ ಸೊಬಗಿನೋಳಿಯನು ಹೇಗೆಂತು ಹೊಗಳಲ್ಕೆ!
ಅಲ್ಲಿ ಕಂಡುದು ಬರಿಯ ನೋಟವಲ್ಲವು ಸಖನೆ
ಅದುವೆ ದಿವ್ಯಾನುಭವ, ದೈವ—ಸಾಕ್ಷಾತ್ಕಾರವೈ! ೧

ಭಾವಪೂರವ ತಂದ ಆ ಬೆಳಗೆ ಬಲು ಚೆಂದ
ಬೆಟ್ಟವನು ಹತ್ತಿದೆವು ಮನಕುಣಿಯೆ ಥಕಥೈ!
ಅಳಿದುಳಿದ ಕೋಟೆಗಳ ಹೆಗ್ಗಲ್ಲು ಹೆಬ್ಬಾಗಿ—
ಲಂಗಳವು ಪೂರ್ವಜರ ಶಿಲ್ಪಸಿದ್ಧಿಯು ಸೈ! ೨

× × × ×

ಮಂದಾಕಿನಿಯಾ ತೀರ್ಥದ ಆಚೆಗೆ
ಪಶ್ಚಿಮ ದ್ವಾರದಿ ನುಗ್ಗಿದೆವು.
ತಂಗಾಳಿಯು ತುಂಬಲು, ಮೇಲ್ನುಗ್ಗಲು
ಮೆಯ್ಯೊಡ್ಡುತೆ ಸುಖ ಸವಿದಿಹೆವು. ೩

ಬಿತ್ತರದಿ ಹರಡಿರುವ ಸುರಸರಸಿ, ಸರಸಿಯಲಿ
ಕ್ಷೀರಾಂಬು, ಅಂಬುಜದ ಬಂಬಲಗಳಲ್ಲಲ್ಲಿ;
ನೋಡಲ್ಲಿ! ಜಲರಾಶಿಯಿಂದೊಗೆದು ಮೆರೆದಿಹುವು
ಬಿಳಿ, ಹಳದಿ, ಕೆಂಪು ಬಣ್ಣಗಳ ತಳೆದಿಹುವು! ೪

ಇದರ ಹಿನ್ನೆಲೆಯಲ್ಲಿ, ದಿವ್ಯ-ಭವ್ಯಾಕೃತಿಯ
ಗಗನದುದ್ದಕೆ ಎದ್ದ, ಮಾಲೆ-ಮಾಲೆಯು ಆದ

ಪರ್ವತಾವಳಿ ಇರಲು, ಅದನು ಮುತ್ತಿಡುವಂತೆ
ಮೇಘಮಾಲೆಯು ಬರಲು ಮೇಲ್ವಾಯ್ದು, ಮತ್ತದರ
ಚಿತ್ರಚಿತ್ರಾಕೃತಿಯು ಚಿತ್ರಪಟ ಚಿತ್ತಚಾ—
ತಕದ ಚಿನ್ನಾಟಕೆಡೆಯಾಗಿರಲು, ಹಸಿರು ಮೇ—
ಲುದ ಹೊತ್ತು ವನಲಕ್ಷ್ಮಿ ಕುಳಿತಂತೆ, ಹುಲ್ಲುಗಾ—
ವಲ ಚೆಲುವು ಚೆಲ್ಲವರಿದಿತ್ತು — ಮನಕೆ ಮುದವಿತ್ತು. ೫

ಚೆಲುವರ ಚೆಲುವನು ಮನ್ಮಥನು
ಮನ್ಮಥನಯ್ಯನು ಶ್ರೀಹರಿಯು
ಶ್ರೀಹರಿ ಪ್ರೀತಿಯು ಕಮಲದಲಿ
ಕಮಲದ ಇರುಹದು ಸರದಲ್ಲಿ—
ಸರವೇ ಸೊಬಗಿಗೆ ಆಧಾರ
ಸರಿಯುದಕಾವುದು ನೀ ತೋರಾ!
ಅಲ್ಲಿದೆ ಮೀನಾಕ್ಷಿಯ ಚೆಲ್ವು—
ಶೇಷನ ಶಯ್ಯೆಯು ಇಹುದಲ್ಲಿ;
ಗರುಡನು ಗರಿಗೆದರುವ ನೋಡು
ತುಂಬಿಯು ಹಾಡೇ ತುಂಬುರ ಗಾನಽ
ಗಾನವು ಗಾನಽ ಕಿವಿಗಮೃತ ಪಾನಽ!
ಇಂತಿದುವೇ ವೈಕುಂಠದ ನೋಟಽ
ನೋಟಕೆ ನೋಟಽ ಏನೀ ಮಾಟಽ
ಮಾಟವ ಬಣ್ಣಿಸೆ ಶಬ್ದವೆ ಇಲ್ಲಽ

# ಶಹಪುರದ ತಾವರೆಕೆರೆ

ಹೊರಗಣ್ಣು ಒಳಗಣ್ಣುಗಳನೆರಡನೂ ತಣಿಪ
ಆ ಸೊಬಗಿನೋಳಿಯನು ಹೇಗೆಂತು ಹೊಗಳಲೈ !
ಅಲ್ಲಿ ಕಂಡುದು ಬರಿಯೆ ನೋಟವಲ್ಲವು ಸಖನೆ
ಅದುವೆ ದಿವ್ಯಾನುಭವ, ದೈವ—ಸಾಕ್ಷಾತ್ಕಾರವೈ ! ೧

ಭಾವಪೂರವ ತಂದ ಆ ಬೆಳಗೆ ಬಲು ಚೆಂದ
ಬೆಟ್ಟವನು ಹತ್ತಿದೆವು ಮನಕುಣಿಯೆ ಥಕಥೈ !
ಅಳಿದುಳಿದ ಕೋಟೆಗಳ ಹೆಗ್ಗಲ್ಲು ಹೆಬ್ಬಾಗಿ—
ಲಂಗಳವು ಪೂರ್ವಜರ ಶಿಲ್ಪಸಿದ್ಧಿಯು ಸೈ ! ೨

× × × ×

ಮಂದಾಕಿನಿಯಾ ತೀರ್ಥದ ಆಚೆಗೆ
ಪಶ್ಚಿಮ ದ್ವಾರದಿ ನುಗ್ಗಿದೆವು.
ತಂಗಾಳಿಯು ತುಂಬಲು, ಮೇಲ್ನುಗ್ಗಲು
ಮೆಯ್ಯೊಡ್ಡುತೆ ಸುಖ ಸವಿದಿಹೆವು. ೩

ಬಿತ್ತರದಿ ಹರಡಿರುವ ಸುರಸರಸಿ, ಸರಸಿಯಲಿ
ಕ್ಷೀರಾಂಬು, ಅಂಬುಜದ ಬಂಬಲಗಳಲ್ಲಲ್ಲಿ;
ನೋಡಲ್ಲಿ ! ಜಲರಾಶಿಯಿಂದೊಗೆದು ಮೆರೆದಿಹುವು
ಬಿಳಿ, ಹಳದಿ, ಕೆಂಪು ಬಣ್ಣಗಳ ತಳೆದಿಹುವು ! ೪

ಇದರ ಹಿನ್ನೆಲೆಯಲ್ಲಿ, ದಿವ್ಯ–ಭವ್ಯಾಕೃತಿಯ
ಗಗನದುದ್ದಕೆ ಎದ್ದ, ಮಾಲೆ-ಮಾಲೆಯು ಆದ

ಪರ್ವತಾವಳಿ ಇರಲು, ಆದನು ಮುತ್ತಿಡುವಂತೆ
ಮೇಘಮಾಲೆಯು ಬರಲು ಮೇಲ್ವಾಯ್ದು, ಮತ್ತದರ
ಚಿತ್ರಚಿತ್ರಾಕೃತಿಯು ಚಿತ್ರಪಟ ಚಿತ್ತಚಾ —
ಕಕದ ಚಿನ್ನಾಟಿಕೆಡೆಯಾಗಿರಲು, ಹಸಿರು ಮೇ–
ಲುದ ಹೊತ್ತು ವನಲಕ್ಷ್ಮಿ ಕುಳಿತಂತೆ, ಹುಲ್ಲುಗಾ–
ವಲ ಚೆಲುವು ಚೆಲ್ಲವರಿದಿತ್ತು — ಮನಕೆ ಮುದವಿತ್ತು. ೫

ಚೆಲುವರ ಚೆಲುವನು ಮನ್ಮಥನು
ಮನ್ಮಥನಯ್ಯನು ಶ್ರೀಹರಿಯು
ಶ್ರೀಹರಿ ಪ್ರೀತಿಯು ಕಮಲದಲಿ
ಕಮಲದ ಇರುಹದು ಸರದಲ್ಲಿ –
ಸರವೇ ಸೊಬಗಿಗೆ ಆಧಾರ
ಸರಿಯುದಕಾವುದು ನೀ ತೋರಾ !
ಅಲ್ಲಿದೆ ಮೀನಾಕ್ಷಿಯು ಚೆಲ್ವು–
ಶೇಷನ ಶಯ್ಯೆಯು ಇಹುದಲ್ಲಿ;
ಗರುಡನು ಗರಿಗೆದರುವ ನೋಡು
ತುಂಬಿಯು ಹಾಡೇ ತುಂಬುರ ಗಾನಃ
ಗಾನವು ಗಾನಃ ಕಿವಿಗಮೃತ ಪಾನಃ!
ಇಂತಿದುವೇ ವೈಕುಂಠದ ನೋಟಃ
ನೋಟಕೆ ನೋಟಃ ಏನೀ ಮಾಟಃ
ಮಾಟವ ಬಣ್ಣಿಸೆ ಶಬ್ದವೆ ಇಲ್ಲಃ

ಕುರುಬನ ಕೊಳಲುಲಿ ಕರ್ಣರಸಾಯನವಾಗಿಹುದು,
ಸ್ವಚ್ಛಂದದ ಕೇಕೆಯು ಭಾವನೆಯಾಳವ ತಟ್ಟುವುದು. ೭

ತುಂಟರ ಜಲಕೇಳಿಯು ನೀರಿಗೆ ಧುಮುಕಲು ಕರೆಯುವುದು
ಆಗಸಿತಿಯರ ಹಾಡದು ಜೀವದ ತಂತಿಯ ಮಿಡಿಯುವುದು. ೮

ಚಿಗುರೆಯ ತಂಡದ ಮಂಗದ ಹಿಂಡಿನ ಪಾಟವವು
ಪಟ್ಟಣವಾಸಿಯನೌಷಧಿಜೀವಿಯನೇಡಿಸುತಿಹುವು. ೯

ಧನ್ಯ-ಧನ್ಯರೀ ಶ್ರಮಿಕರೀ ಪಥಿಕರೀ ತರಳರು
ಸರದಿ ವಸ್ತ್ರಗಳ ಶುಚಿಗೈವ ಭಾಗ್ಯದ ಅಗಸರು!
ಪಟ್ಟಣದ ಕೊಳೆ, ದೂಳಿ ದೂಸರಕೆ ಇವರತಿ ದೂರರು
ಮೂಡು ಮುಳುಗು ಪ್ರಕೃತಿ ಮಡಿಲಲಿ ಕಳೆವರೀ ನೋಂತರು
ನಾಗರಿಕತೆಯ ಪಾಳ್ಗತೆಯು, ಸಾಕು ಸಾಕೆಲೆ ಮಾನವಾ,
ಯಂತ್ರವಶರಾಗದೊಲು ಸ್ವಾತಂತ್ರ್ಯದೆಡೆ ತೆರಳುವಾ!
ಗಿರಿಯ ಗಂಹರಗಳಿಗೆ ನದಿಯ ಸಂಗಮಗಳಿಗೆ ಮರಳುವ–
ಹಿರಿಯ ಋಷಿಗಳ ತೆರದಿ ದೇವವಾಣಿಯ ಕೇಳುವಾ! ೧೦

ಸತ್ಯವೆ ಸೌಂದರ್ಯವು
ಸೌಂದರ್ಯವೆ ಸತ್ಯ!
ಅದುವೆ ಪರಬ್ರಹ್ಮವು ನಿತ್ಯ
ಅದ ಕಂಡುಂಡವ ಕೃತಕೃತ್ಯ!
ಸೌಂದರ್ಯೋದಧಿ ಕ್ಷೀರೋದಧಿ

ಕ್ಷೀರೋದಧಿ ಸೌಂದರ್ಯೋದಧಿಯು—
ಏನಳಿದರು ಉಳಿವುದು ಶೇಷS
ಆ ಶೇಷವೆ ಬಹು ವಿಶೇಷS
ಓಂ ಸೌಂದರ್ಯಾಯ ನಮಃ
ಓಂ ಸೌಂದರ್ಯಾಯ ನಮಃ
ದುರ್ಭಾವನೆಯಳಿಯಲಿ
ಸದ್ಭಾವನೆ ಬೆಳೆಯಲಿ!
ಓಂ ಸೌಂದರ್ಯಾಯ ನಮಃ
ಓಂ ಸೌಂದರ್ಯಾಯ ನಮಃ! ೧೧

— ಜ. ಶ್ರೀ. ಜ.

**ಕವಿ ಪರಿಚಯ:**— ‘ ಶಹಪುರದ ತಾವರೆಕೆರೆ ’ ಯಲ್ಲಿ ಪರಮಾತ್ಮನ ಅಗಾಧ ಅಚಿಂತ್ಯ ಸೃಷ್ಟಿಯನ್ನು ಬಣ್ಣಿಸಿ, ಸಾಕ್ಷಾತ್ ವೈಕುಂಠವನ್ನೇ ತಂದಿರಿಸಿದ ಭಾವ ಜೀವಿಗಳು ಶ್ರೀ ಜಯರಾವ್ ದೇಸಾಯಿ ಜರಕುಂಟಿ, ಬಿ. ಎ. ಬಿ. ಇಡಿ., ಮುಖ್ಯಾಧ್ಯಾಪಕರು ಉನ್ನತ ಶಾಲೆ ಶಹಪುರ, ಇವರು. ಇವರ ಎಲ್ಲ ಕವನಗಳು ಇದೇ ರೀತಿ ಭಾವಪೂರ್ಣವಾಗಿವೆ.

# ಅಭಿಪ್ರಾಯ

ನಮ್ಮ 'ಅರುಣ ಗ್ರಂಥಮಾಲೆ' ಯ ಎರಡನೆಯ ಕಿರಣ, 'ಜೀವನ ಸಂಸಾರ' ವು ಬಹುಜನರ ಮೆಚ್ಚುಗೆಗೆ ಪಾತ್ರವಾಗಿ ಪ್ರಖ್ಯಾತಿಯನ್ನು ಗಳಿಸಿದೆ. ಹಾಸ್ಯರಸ ಪ್ರಧಾನವಾದ ಈ ಏಕಾಂಕನಾಟಕವನ್ನಭಿನಯಿಸದ ಉತ್ಸವಗಳೇ ಅತಿವಿರಳವೆಂದು ಹೇಳಿದರೆ ಅತಿಶಯೋಕ್ತಿಯೇನಾಗಲಿಕ್ಕಿಲ್ಲ. ಈ ನಾಟಕವನ್ನೋದಿ ಹೊಟ್ಟೆತುಂಬ ನಕ್ಕ ಕವಿವರ್ಯ ಶ್ರೀ. ದ. ರಾ. ಬೇಂದ್ರೆಯವರು ಲೇಖಕರಿಗೆ ಮೆಚ್ಚುಗೆಯ ಪತ್ರವನ್ನು ಬರೆದು '.................. ಕೃತಿ ಅತ್ಯುತ್ತಮವಾಗಿದೆ.' ಎಂದು ಪ್ರಶಂಸಿಸಿದ್ದಾರೆ. ಬೆಂಗಳೂರಿನ 'ಕನ್ನಡ ನುಡಿಯ' ಸಂಪಾದಕರೂ 'ಈ ನಾಟಕ ಓದುವಂತಹದಾಗಿದೆ. ಒಮ್ಮೆ ಅವಶ್ಯ ಓದಬೇಕು.' ಎಂದಿದ್ದಾರೆ. ಅಖಿಲ ಭಾರತ ಆಕಾಶವಾಣಿ ಕೇಂದ್ರ ಹೈದರಾಬಾದಿನಿಂದಲೂ ಈ ನಾಟಕವನ್ನು ಬಿತ್ತರಿಸಲಾಗಿದೆ. ಈ ಬಗ್ಗೆ ನಾಟಕಕಾರರಾದ ಶ್ರೀ ಸಗರ ಕೃಷ್ಣಾಚಾರ್ಯರು ಅಭಿನಂದನಾರ್ಹರು. ಸಂಘಕ್ಕೂ ಅವರಿಂದ ತುಂಬ ಹೆಮ್ಮೆ.

ಸಂಪಾದಕ

---

ಮುದ್ರಕರು :

ಕಲ್ಯಾಣ ಕರ್ನಾಟಕ ಮುದ್ರಣಾಲಯ

ಕಲಬುರ್ಗಿ.

# ಅರುಣ ಗ್ರಂಥಮಾಲೆಯ ಪ್ರಕಟನೆಗಳು

(೧) ಮಧುರ ಮಿಲನ ( ಕತೆಗಳ ಸಂಗ್ರಹ ) ವಿವಿಧ ಕತೆಗಾರರು.

(೨) ಜೀವನ ಸಂಸಾರ ( ಏಕಾಂಕ ನಾಟಕ ) ಸಗರ ಕೃಷ್ಣಾಚಾರ್ಯ.

(೩) ಕವನ ಕುಸುಮ ವಿವಿಧ ಕವಿಗಳು.

## ಪುಸ್ತಕ ದೊರೆಯುವ ವಿಳಾಸ:

(೧) ಎಂ. ಆರ್. ಬುದ್ಧಿವಂತಶೆಟ್ಟಿ ಪುಸ್ತಕ ವ್ಯಾಪಾರಿಗಳು
ಪೋ. ರಂಗಂಪೇಟೆ ತಾ. ಸುರಪುರ Via ಯಾದಗಿರಿ ( ಸಿ. ರೇಲ್ವೆ)

(೨) ಕನ್ನಡ ಬುಕ್ ಡಿಪೋ, ಈಸಾಮಿಯಾ ಬಾಜಾರ ಹೈದರಾಬಾದು

ಸಂಪಾದಕ.